START

START

START

MICRO FILMED
BY

KARNATAKA STATE
ARCHIVES

1991

MICRO FILMED
BY

KARNATAKA STATE
ARCHIVES

1991

ಜೀವನ ಶಿಕ್ಷಣ

ವೈಜ್ಞಾನಿಕ ಮನಸ್ಸು ಪ್ರಕೃತಿ

ಧರ್ಮ ಮಾಡಿ-೧

ಜಿಲ್ಲಾ ಶಿಕ್ಷಣ

ತ್ರೈಮಾಸಿಕ ಮುಂಗಡ ಪತ್ರಿಕೆ

೧೯೯೯-೨೦೦೦

ಮುಂದುವರೆಸಲಾಗಿದೆ

1878

ಜೀವನ ರೇಖೆ

ಪು: 168-169

ಮುಂದುವರಿಸಲಾಗಿದೆ

1878

ಜೀವನ ಶಿಕ್ಷಣ

ಪು: 168-169

ಪ್ರ.—ಆ ,,ಬಿಂದು,, ಏನು?

ಉ.—ಏನಂದರೆ ,,ಲುಕ್ ಸಮಾಸ,,ದಲ್ಲಿ ಲೋಪವಾಗುವ
ಕ್ಕಿ ಪ್ರತ್ಯಯವು ಇದರಲ್ಲಿ(ಅಲುಕದಲ್ಲಿ)ಲೋಪವಾಗುವದಿ

ಪ್ರ.—ಹಾಗಾದರೆ ಈ ಎರಡೂ ಸಮಾಸ (ಲುಕ್ ಮತ್ತು
ಲುಕ್)ಗಳಿಗೆ ಅನುಸರಿಸಿ ಬೇರೆ ಬೇರೆ ೪।೪ ಉದಾಹರ
ಗಳನ್ನು ಹೇಳು. ಉದಾಹರಣೆಗಳು.

ಲುಕ್ ಸಮಾಸ.	ಅಲುಕ್ ಸಮಾಸ.
೧ ಬಾಯ್ಮಾತು.	೨ಕೈಬೆರಳು. ೧ಬಾಯಮಾತು. ೨ಕೈಯ ಬೆ
೩ನಿಂಬೆಹಣ್ಣು.	೪ಪ್ಪಾರುಗುಬ್ಬಿ ೩ನಿಂಬೆಯಹಣ್ಣು. ೪ಪ್ಪಾರಗುಬ್ಬಿ

ಪ್ರ.—ಈಗ ನಿನಗೆ ಈ ಎರಡೂ (ಲುಕ್ ಮತ್ತು ಅಲುಕ್)ಸ
ಸಗಳೊಳಗಿನ ಭೇದವು ಚಂನಾಗಿ ಗೊತ್ತಾಯಿತೋ?

ಉ.—ಆಯಿತು.

ಪ್ರ.—ಕೆಲವು ಉದಾಹರಣೆಗಳನ್ನು ಕೇಳಿದರೆ ಅವು
ಏನಸಮಾಸದವು ಎಂದು ನೀನು ಗುರ್ತಿನೇ ಹೇಳುವಿಯಾ?

ಉ.—ಹೇಳುವೆನು.

ಪ್ರ.—ಹಾಗಾದರೆ ಕೆಳಗೆ ಬರೆದಿರುವ ಉದಾಹರಣೆಗಳ
ಸಮಾಸಗಳನ್ನು ಹೇಳು. — ಉದಾಹರಣೆಗಳು

೧ವ್ಯೂರಿನವರು. ೨ಪಾಂಡುರಂಗ. ೩ಮಾಮಿನಹಣ್ಣು. ೪
ಲೇಕಾಲು. ೫ಮಳೆಯಹನಿ. ೬ಅಂಗಡಿಕಟ್ಟಿ ೭ಕಾಲ್ಪ
೮ಕಂಗುಬೇನೆ ೯ಹೊಟ್ಟೆಶೂಲಿ. ೧೦ಮೇಳೆಮರಿ. ೧೧
ವೀರ. ೧೨ ಕೆತಳಜಿನೆಲ.

ಉ.—ಮೊಲನ ಉದಾಹರಣೆಗಳಲ್ಲಿ ಮೊದಲಿನೇ ೫ ಲು
ಸಮಾಸದವು; ಉಳಿದವುಗಳಲ್ಲಾ (೭) ಲುಕ್ ಸಮಾಸದ

(ಮುಂದೆ ನೋಡಿರಿ.)

ಶಾಲಾಪತ್ರಕವು.

ಪುಸ್ತಕ ೧೪] [ಸಂಚಿಕೆ ೭

ಜುಲ್ಯ, ೧೭೭೮

Educational Intelligence.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು

ಬಂಗಾಲ ಇಲಾಖೆಯ ವಿದ್ಯಾ ಖಾತೆಯ ಡಾಯರೆಕ್ಟರರು ತಮ್ಮ ಖಾತೆಯ ಸೌಕರ ಜನರಲ್ಲಿ ೭ ವರ್ಗಗಳನ್ನು ಮಾಡಲಿಕ್ಕೆ ಸರಕಾರದವರ ಸಮ್ಮತಿಯನ್ನು ಕೇಳಿದ್ದರು. ಅದಕ್ಕೆ ಸ್ಪೇಟ ಸೆಕ್ರೆಟರಿಯವರು ಸಮ್ಮತಿಸಿದಂತೆ ತಿಳಿದದೆ. ಅದೇ ವರ್ಗೀಕರಣವು ನಮ್ಮ ಮುಂಬಯಿ ಇಲಾಖೆಯಲ್ಲಿ ಸಹ ಸ್ವೀಕರಿಸಲ್ಪಡುವದೆಂದು ತೋರುತ್ತದೆ.

ವಿಲಾಯತಿಯಲ್ಲಿ ಗ್ರೀನಿಚಯೆಂಬಲ್ಲಿಯ ವೇಧಶಾಲೆಯಲ್ಲಿ ವೊಂದು ಚಮತ್ಕಾರವ ಯಂತ್ರವು ಮಾಡಲ್ಪಟ್ಟಿದೆ. ಅದು ಪ್ರತಿದಿವಸ ಸೂರ್ಯಪ್ರಕಾಶವು ಯೆಷ್ಟು ತಾಸು ಬಿತ್ತೆಂಬದನ್ನು ಒರಿಡುತ್ತದೆ. ಕಳಿದ ಫೆಬ್ರುವಾರಿಯ ೧೦ನೇ ತಾರೀಖಿನ ವರೆಗೆ ಹಿಂಯಿನ ೧೨ ತಿಂಗಳುಗಳಲ್ಲಿ ಪ್ರೊಟ್ಟಿಗೆ ೧೨೮೬ ತಾಸು ಬಿಸಿಲು ಬಿತ್ತೆಂದು ಆ ಯಂತ್ರವು ತುಂಬಿಟ್ಟ ರಜಿಸ್ತರಿನಿಂದ ತಿಳಿಯುತ್ತದೆ. ಇದರಿಂದ ಲಂಡನ್ ಪಟ್ಟಣದಲ್ಲಿ ಪ್ರತಿದಿವಸ ಸರಾಸರೀ ಮಾನದಿಂದ ೩॥. ತಾಸಿಗಿಂತ ಹೆಚ್ಚು ಬಿಸಿಲು ಬೀಳುವಲ್ಲೆಂದು ಸಿದ್ಧವಾಗುತ್ತದೆ.

ಮೈಸೂರ ಸರಕಾರದವರು ಹೊಗೆಬಂಡಿಯ ಮಾರ್ಗವ
ಕಟ್ಟುವಲಿಕ್ಕಾಗಿ ಇಂಡಿಯಾ ಸರಕಾರದವರಿಗೆ ೧೦೦೦೦೦ ರೂ
ಯಿ ಸಾಲಬೇಡಿದಂತೆ ಕೇಳುತ್ತೇವೆ.

ಪ್ರೊಫೇಸರ ಮೂನೀಯರ ವುಯಿಲಿಯಮ್ಸ ಯೆಂಬ
ಲಾಯಕೀ ಪಂಡಿತರು ಈ ದೇಶಕ್ಕೆ ಯೆರಡು ಸಾರಿ ಬಂ
ಹೋದರು. ಇವರು ಈ ದೇಶದ ಯುನಿವರ್ಸಿಟಿಗಳನ್ನು ಪ
ವಿಗಳನ್ನು ಸಂಪಾದಿಸಿದಂಥ ಜವರನ್ನು ಜರಿದದ್ದು ಕ
ಗಂವರೆ—

ಈ ಜನರ ವಿಚಾರಕ್ಕೆ ಕಟ್ಟಿಲ್ಲ. ಇವರು ಮಾತಾಡುವ
ಗ ಸಮರ್ಪಕವಾಗಿ ಮಾತಾಡುತ್ತಾರೆ; ಆದರೆ ಬರಿಯುವಾ
ತಪ್ಪುತ್ತಾರೆ. ಇವರು ತಪ್ಪು ಶಬ್ದಗಳಿಗೆ ತಾಪು ಜಬಾಬದಾ
ರಲ್ಲೆಂಬ ತಿಳುವಳಿಕೆಯಿಂದ ಮನಸಿಗೆ ಬಂದಹಾಗೆ ಪರ್ತನ
ತ್ತಾರೆ. ಯಾವದೊಂದು ಧರ್ಮದಲ್ಲಿ (ಅದು ಸಟಿ ಇರಲಿ
ಟವಿರಲಿ) ನಿಜವಾದ ಭಕ್ತಿಯನ್ನು ಇಡುವದರಿಂದ ಪ್ರೊದಗು
ಲಾಭವು ಅವರಿಗೆ ಯೆಷ್ಟು ಮಾತ್ರವೂ ಗೊತ್ತಿಲ್ಲ. ಅವರ
ತಮ್ಮ ಸ್ವಭಾಷೆಯನ್ನು ಧಿಕ್ಕರಿಸುತ್ತಾರೆ, ಸ್ವದೇಶದ ವಿದ್ಯೆ
ಮಾನ ಕೊಡುವದಿಲ್ಲ, ಸ್ವಧರ್ಮವನ್ನು ಬಿಡುತ್ತಾರೆ, ಜಾತಿನಿಯ
ಮಗಳನ್ನು ನಡಿಸುವದಿಲ್ಲ, ದೇಶಾಚಾರಗಳಿಗೆ ಉಪಹಾಸ ಮ
ಡುತ್ತಾರೆ. ಅವರಿಗೆ ಇಂಗ್ಲಿಷ ಭಾಷೆಯ ಜ್ಞಾನವು ಜನ್ಮಾಗ
ರುವದಿಲ್ಲ, ಅವರ ವಿಚಾರಗಳಲ್ಲಿ ಕೌಶಲ್ಯವಿರುವದಿಲ್ಲ; ಅವ
ಲ್ಲಿ ರಾಜನಿಷ್ಠೆಯು ಯೆಷ್ಟು ಮಾತ್ರವೂ ಇರುವದಿಲ್ಲ.

ಕಡೆಯಪಕ್ಷ ಕೊತರ್ಾಗಿ ಉಳಿದ ದೋಷಗಳನ್ನು ಪ್ರ
ಯಿಲಿಯಮ್ಸ ಸಾಹೇಬರು ಅನ್ಯಾಯದಿಂದ ಕೊಟ್ಟಿರುತ್ತಾರೆ

ನಮಗೆ ತೋರಿದಲ್ಲಿ.

ಆದರೆ ಕಲಕತ್ತೆಯ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಕೊಡುವಾಗ ಕೂಡಿದ ಸಭೆಯ ಅಧ್ಯಕ್ಷರಾಗಿ ಬಂ ಮಿ. ಜಸ್ಟೀಸ ಮುಂಕ್ಬೀ ಯೆಂಬವರು ಹಿಂದೂ ವಿದ್ಯಾರ್ಥಿಗಳನ್ನು ಈ ಪ್ರಕಾರ ಹೊಗಳುತ್ತಾರೆ——

ಈ ಕಾಲೇಜಕ್ಕೂ ನನಗೂ ನಿಕಟ ಸಂಬಂಧವಿರುವ ಕಾರಣ ಇಲ್ಲಿಯ ಸ್ಥಿತಿಯು ನನಗೆ ಜನ್ಮಾಗಿ ತಿಳಿದದೆ. ಉಪಯುಕ್ತವಾದ ಕೆಲಸಗಳನ್ನು ಮಾಡಲಿಕ್ಕೆ ನೇಟೀವ ಜನರು ನಿಜವಾಗಿ ಲಾಯಖರಿರುತ್ತಾರೆಂಬ ಮಾತು ನನಗೆ ಇತ್ತಿತ್ತಲಾಗಿ ಮಾತ್ರ ತಿಳೀತು. ಈ ಜನರ ಮನಸು ಕೇವಲ ಗೊಂದಲ ಮನ್ನು ಹುಟಿಸಲಿಕ್ಕೂ ಹುಡುಗರ ಆಟಿಕೆಗಳನ್ನು ಮಾಡಲಿಕ್ಕೂ ಮಾತ್ರ ಉಪಯುಕ್ತವಾದದ್ದೆಂದು ಮೊದಲು ನಾನು ನಂಬುತ್ತಿದ್ದೆನು.ಆದರೆ ಮೊಳಗಡೆಯಲ್ಲಿ ನನಗೆ ಇವರ ಸಹವಾಸವು ಹೆಚ್ಚಿಗೆ ಆದದರಿಂದ ಇವರ ಮನಸು ಸೂಕ್ಷ್ಮಗ್ರಾಹಿಯಾಗಿಯೂ ಶೃಪಹಾರಕ್ಕೆ ಪ್ರಯೋಜಕವಾದದ್ದಾಗಿಯೂ ಇರುತ್ತದೆಂದು ನಾನು ಮನಗಂಡೆನು. ವೈದ್ಯಕದ ಉದ್ಯೋಗದಲ್ಲಿ ಇವರು ನಿಶ್ಣಾತರಾಗಿ ಬಹಳ ಉಪಯೋಗದ ಕೆಲಸಗಳನ್ನು ಮಾಡುತ್ತಾರೆ. ಮೆಡಿಕಲ್ ಕಾಲೇಜದಲ್ಲಿ ಕಲಿತವರು ಬಹು ಜನರ ರೋಗಗಳನ್ನು ಪರಿಹರಿಸಿ, ಅವರನ್ನು ಆರೋಗ್ಯದ ಮಾರ್ಗಕ್ಕೆ ಹಚ್ಚಿಸುತ್ತಾರೆ. ಈ ವಿದ್ಯಾರ್ಥಿಗಳು ಈ ಕಾಲೇಜಿನ ಕೀರ್ತಿಯನ್ನು ಇನ್ನೂ ಬಹಳ ಹೆಚ್ಚಿಗೆ ಬೆಳೆಸುವರೆಂದು ನಾವು ನಂಬುತ್ತೇವೆ.

ಮುಂಬಯಿಯಲ್ಲಿ ಡಾಕ್ಟರ ಬ್ಲೈನಿ ಯೆಂಬವರು "ಸು
ಪಾನದ ವಿಷೇಧ" ಯೆಂಬ ವಿಷಯವನ್ನು ಕುರಿತು ಪ್ರೊ
ಗದೆಯಲ್ಲಿ ವ್ಯಾಖ್ಯಾನಿಸಿಕೊಟ್ಟಿರು. ಅದರ ಸಾರಾಂಶವೇನಂ
ರೆ— ಮದ್ಯಪಾನದಿಂದ ದೇಹಕ್ಕೆ ಅರೋಗ್ಯವಾಗುತ್ತದೆಂದು
ದುವರೆಗೆ ನಾವೆಲ್ಲರು ಯೆಣಿಸುತ್ತ ಬಂದೆವು. ಆದರೆ ಈ
ಳುವಳಿಕೆ ತಪ್ಪಾದದ್ದೆಂದು ಈಗ ಅನುಭವಕ್ಕೆ ಬರುತ್ತಾ
ಡಿದೆ. ವಿಲಾಯತಿಯಲ್ಲಿ ೯೦೦ ಮಂದಿ ಹೆಸರಾದ ಡಾಕ್ಟ
ರರು ಈ ಅಭಿಪ್ರಾಯವನ್ನು ಸರಕಾರಕ್ಕೆ ಬರಿದು ತಿಳಿಸಿ
ಜನರೊಳಗೆ ಮದ್ಯಪಾನವು ನಡಿಯುದ ಹಾಗೆ ಉಪಾಯವನ್ನು
ಮಾಡಬೇಕೆಂದು ಆರ್ಜಿಯನ್ನು ಮಾಡಿದ್ದಾರೆ.

—೦—

ಅಮೇರಿಕದಲ್ಲಿ ಪೊಬ್ಬ ಡಾಕ್ಟರನು ಹೆಂಗಸರಿಗಾಗಿ ಕ
ಗದದ ಪೊಷಾಗು ತಯಾರು ಮಾಡಿರುತ್ತಾನೆ. ರಸಾಯ
ಕೃತಿಯಿಂದ ಪೊಂದು ಬಗೆಯಬಣ್ಣವನ್ನು ಹುಟ್ಟಿಸಿ, ಅದನ
ಆ ಪೋಷಾಗಿಗೆ ಕೊಟ್ಟಿದರಿಂದ ಅದು ಬೆಂಕಿಯಿಂದ ಬೇಗ ಸ
ಡುವದಿಲ್ಲ. ಒಬ್ಬ ಹೆಂಗಸಿನ ಪೊಷಾಗಿಗೆ ೨೫. ರೂಪಾಯಿಗ
ತ ಹೆಚ್ಚು ಬೆಲೆಯಿಲ್ಲ!

—೦—

ಬುದ್ಧಗಯಾ ಯೆಂಬಲ್ಲಿಯ ಪ್ರಾಚೀನ ಕಾಲದ ಗುಡಿಗಳನ್ನು
ದುರಸ್ತು ಮಾಡಿಸುವದಕ್ಕಾಗಿ ಬ್ರಹ್ಮ ದೇಶದ ಅರಸನು ೩ ಲ
ಕ್ಷ ರೂಪಾಯಿ ಪೆಚ್ಚ ಮಾಡತಕ್ಕವನಿದ್ದಾನೆ. ಆ ದುರಸ್ತಿಯ
ಕೆಲಸವು ಸದ್ಯಕ್ಕೆ ಹಿಂದುಸ್ಥಾನ ಸರಕಾರದವರ ವಿದ್ಯಮಾನದಿ
ದ ನಡಿದದೆ.

—೦—

ಗಿರಣಿ ರೋಗಕ್ಕೆ ಅತಿಸುಲಭ ಉಪಾಯವು.— ಬೇವಿನ ತೊಪ್ಪಲನ್ನು ನೀರೊಳಗೆ ಹಾಕಿ, ಆ ನೀರಿನಿಂದ ರೋಗಿಗೆ ಆರು ದಿವಸಗಳವರೆಗೆ ಸ್ನಾನಕ್ಕೆ ಕೊಡುವುದು ಹೋದರೆ ರೋಗವು ನಿಶ್ಚಯವಾಗಿ ಸ್ವಲ್ಪಗುತ್ತದೆಂದು ಪ್ರೊಫೆಸರ್ ಗೃಹಸ್ಥರು ಸ್ವಂತ ಅನುಭವದಿಂದ ಬರೆದಿದ್ದಾನೆ.

—೦—

ಇತಲೀ ದೇಶದಲ್ಲಿ ೧೦ ವರ್ಷದ ಕನ್ನಿಕೆಯೊಬ್ಬಳು ಪಿಯಾನೊ ಯೆಂಬ ವಾದ್ಯವನ್ನು ಬಾರಿಸುವದರಲ್ಲಿ ಅತಿಪ್ರವೀಣಳಾಗಿರುತ್ತಾಳಂತೆ. ಆ ಹುಡುಗಿ ಈಗ ಲಂಡನಪಟ್ಟಣದಲ್ಲಿ ಇರುತ್ತಾಳೆ.

—೦—

ತಂಜಾವರದ ಅರಮನೆಯಲ್ಲಿ ಬುನಾಯಿಯು ಪುಸ್ತಕಗಳ ಸಂಗ್ರಹವು ಬಹಳ ಇರುತ್ತದೆ. ಆ ಪುಸ್ತಕಗಳ ಹೊಸ ಪಟ್ಟಿಯನ್ನು ಮಾಡಿಸುವದಕ್ಕಾಗಿ ಮದ್ರಾಸ ಸರಕಾರದವರು ಡಾಕ್ತರ ಬರ್ನೆಲ್ ಯೆಂಬವರನ್ನು ತಂಜಾವರಕ್ಕೆ ಕಳುಹಿರುತ್ತಾರೆ.

—೦—

ಪಾರೀಸಪಟ್ಟಣದಲ್ಲಿ ಅಚ್ಚು ಹಾಕ್ಕಿಪ್ಪೊಂದು ಬಾಯಬಲಿನ ಹಳೆ ಪ್ರತಿಯು ಲಿಲಾವಿನಲ್ಲಿ ೨೦೦೦ ಪೌಂಡಿಗೆ ಮಾರಲ್ಪಟ್ಟಿತು. ಈ ಪುಸ್ತಕವು ಯುರೋಪಖಂಡದಲ್ಲಿ ಯೆಲ್ಲಕ್ಕು ಮೊದಲು ಛಾಪಿಸಲ್ಪಟ್ಟಿದ್ದೆಂದು ಹೇಳುತ್ತಾರೆ.

—೦—

ಧಾರವಾಡ ಜಿಲ್ಲೆಗೆ ಈ ವರ್ಷ ಹೆಚ್ಚಿಗೆ ಹಣ ದೊರೆವವರೆಗೆ ಯೆಪ್ಪತ್ತೇ ಹೊಸ ಶಾಲೆಗಳು ಸ್ಥಾಪಿಸಲ್ಪಟ್ಟವು.

—೦—

ಮೆಹೆರ್ಬಾನ್ ಡಾಯರೆಕ್ಟರ ಸೊರೆಗಳವರು ಬರುವ ಜಳಿಗಾಲದಲ್ಲಿ ಧಾರವಾಡಕ್ಕೆ ಬಂದು ಯೆರಡು ತಿಂಗಳು ಇಲ್ಲಿ ಇರತಕ್ಕವರಿದ್ದಾರೆಂದು ವರ್ತಮಾನವುಂಟು.

—o—

ಪ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಮೈ. ಇನಸ್ಪೆಕ್ಟರ ಸಾಹೇಬರವರು ಮೇಹೆರ್ಬಾನರಾಗಿ ಹಾಯಸ್ಕೂಲಿಗೆ ಸರಿಯಾದ ಸುಟಿಗಳನ್ನು ಕೊಟ್ಟಿದ್ದು ಕೇಳಿ ಸಂತೋಷ ವಡುತ್ತೇವೆ.

—o—

ಮೈ. ಇನಸ್ಪೆಕಟರವರ ಆಫೀಸು ಈ ತಿಂಗಳಲ್ಲಿ ಧಾರವಾಡಕ್ಕೆ ಬಂತು.

—o—

Trigonometry.

ತ್ರಿಕೋಣಮಿತಿ.

ಭೂಮಿತಿ ಗಣಿತವನ್ನು ಕಲಿತನಂತರ ತ್ರಿಕೋಣಮಿತಿಯನ್ನು ಆರಂಭ ಮಾಡುವದು ಸಮಂಜಸ. ಯಾಕಂದರೆ ರೇಖೆ, ವರ್ತುಳ, ತ್ರಿಕೋಣ, ಚೌಕೋನ, ಮುಂತಾದವುಗಳ ಜ್ಞಾನವು ವಿದ್ಯಾರ್ಥಿಗಳಿಗಿರುವದು ಅವಶ್ಯ ವಾದದ್ದು. ಭೂಮಿತಿ ಗಣಿತದಲ್ಲಿ ಆ ರೇಖೆ ಮುಂತಾದವುಗಳ ವಿವರವು ಹೇಳಲ್ಪಟ್ಟಿದ್ದರಿಂದಲೂ, ಆ ಗಣಿತದ ಸಾಹಾಯ್ಯ ವು ತ್ರಿಕೋಣಮಿತಿಗೆ ಅಗತ್ಯವಾದ್ದರಿಂದಲೂ ಮೊದಲು ಭೂಮಿತಿಯನ್ನು ಮನ ಮುಟ್ಟಿ ಅಭ್ಯಾಸಿಸಿದ ಹೊರ್ತು ತ್ರಿಕೋಣಮಿತಿಯು ನೆಟ್ಟಗೆ ತಿಳಿಯ ಲಾರದು. ಸ್ವಲ್ಪ ಗಣಿತ ಅಂದರೆ ಅಂಕಗಣಿತ ಮಾತ್ರ ಸ್ವಲ್ಪ ಬಲ್ಲಂಥವರು ತ್ರಿಕೋಣಮಿತಿಯನ್ನು ಕಲಿತು ಕೆಲಸ ನಡಿಸುವದುಂಟು. ಆದರೆ

ಈ ಗಣಿತದ ಯಃಕಶ್ಚಿತ್ ಜ್ಞಾನವು ಅವರಿಗೆ ಆಗಬೇಕೆಂಬ ಕೆಲವು ಸಾಧಾರಣಿಗಳನ್ನು ಮಾತ್ರ ಮಾಡಿ ಕೊಂಡು ಅವರು ತ್ರಿಕೋಣ ಜ್ಞಾನವನ್ನು ಮಾತ್ರ ಸಂಪಾದಿಸುತ್ತಾರೆ. ಹೀಗೆ ಮಾಡುವದರಿಂದ ವಿಶೇಷ ಪ್ರಯೋಜನ ಬಾಗುವದಿಲ್ಲ. ತ್ರಿಕೋಣಮಿತಿಯನ್ನು ಸಾಧ್ಯಂತವಾಗಿ ಕಲಿಯುವದರಲ್ಲಿ ಬಹು ಪ್ರಯೋಜನ ಉಂಟು ಜ್ಯೋತಿಷವನ್ನೂ, ಶಿಲ್ಪಶಾಸ್ತ್ರವನ್ನೂ, ಭೂಮಾಪನವನ್ನೂ, ಇಂಜಿನೀಯರ ವಿದ್ಯವನ್ನೂ ಕಲಿಯುವಂಥ ವಿದ್ಯಾರ್ಥಿಗಳಿಗೆ ತ್ರಿಕೋಣಮಿತಿಯ ಉಪಯೋಗವಿಷ್ಟೆಂದು ಹೇಳಕೂಡದು. ಸಾರಾಂಶ ವಿದ್ಯವಿಲ್ಲದಿದ್ದರೆ, ಕುರುಡ ಹಗ್ಗ ಹೊಸೆದಂತೆ ಆಗುವದೆಂದು ತಿಳಿ ಕೊಳ್ಳ ತಕ್ಕದ್ದು.

ಪ್ರಾರಂಭದಲ್ಲಿ ಭೂಮಿತಿ ತ್ರಿಕೋಣ ಗಣಿತಗಳಲ್ಲಿದ್ದ ಭೇದವು ಸ್ಪಷ್ಟಿಕೆಗೆ ಬರುವದು ಅವಶ್ಯವಾಗಿದ್ದು. ಆವೆರಡೂ ಗಣಿತಗಳು ಭೂಮಿಯನ್ನಳಿಯುವದಕ್ಕೆ ಉಪಯೋಗಿಗಳಾಗಿದ್ದರೂ, ಅವುಗಳ ವಿಷಯಗಳು ಭಿನ್ನವಾಗಿರುತ್ತವೆ. ಭೂಮಿತಿ ಗಣಿತದಲ್ಲಿ ಈ ಕೋನವು ಆ ಕೋನಕ್ಕಿಂತ ದೊಡ್ಡದು, ಸಣ್ಣದು ಅಥವಾ ಆವೆರಡೂ ಸಮವಾದವೆಂತಲೂ, ಈ ತ್ರಿಕೋಣವು ಆ ತ್ರಿಕೋಣಕ್ಕಿಂತ ದೊಡ್ಡದು, ಸಣ್ಣದು, ಅಥವಾ ಆವೆರಡೂ ಸಮವಾದವೆಂತಲೂ ತಿಳಿಸಲ್ಪಡುತ್ತದೆ. ಪರಂತು ಫಲಾಣಿ ಕೋನ ಫಲಾಣಿ ರೇಷೆ, ಇಂತಿಷ್ಟು ಅಳತಿಯುಳ್ಳದ್ದೆಂದು ತ್ರಿಕೋಣಮಿತಿಯ ಗಣಿತದ ಹೊರತು ತಿಳಿಯುವದಿಲ್ಲ.

ಯಾವ ಶಾಸ್ತ್ರವನ್ನು ಕಲಿಯಬೇಕಾದರೂ ಅದರಲ್ಲಿ ಉಪಯೋಗಿಸಲ್ಪಟ್ಟ ಶಬ್ದಗಳ ಪರಿಭಾಷೆಯು ತಿಳಿಯುವದು ಅವಶ್ಯವಾದ ಕೆಲಸವಾದ್ದರಿಂದ, ಕೆಳಗ ತೆಗಿಯಲ್ಪಟ್ಟ ಆ ಪ್ರತಿಯಿಂದ ಅವುಗಳ ಅರ್ಥವನ್ನು ವಿದ್ಯಾರ್ಥಿಯು ತನ್ನ

ಗ್ರಹಿಕೆಗೆ ಚನ್ನಾಗಿ ತಂದು ಕೊಳ್ಳ ತಕ್ಕದ್ದು ಅವಶ್ಯ
ಕ ಕಾರ್ಯವೇ

(ಟೀಪು ---- ಬಾಲಬೋಧ ಅಕ್ಷರಗಳು ಬಹು ತೊಂದರೆ
ಳ್ಳಪಲ್ಲಾದ್ದರಿಂದ ಈ ಗ್ರಂಥದೊಳಗಣ ಆಕೃತಿಗಳಲ್ಲಿ ಆ
ಗಳನ್ನು ಉಪಯೋಗಿಸುತ್ತೇವೆ. ಆದರೆ ಕನ್ನಡ ಅಕ್ಷರಗ
ಸಹ ಅವಶ್ಯವಿದ್ದಲ್ಲಿ ಹಾಕಲ್ಪಡುವವು.)

ಕಪಜಲವು ಒಂದು ಪ
ತ್ರೆಗಳವು. ಅದರಲ್ಲಿ **ಕಜ**,
ಪಲ, ವ್ಯಾಸಗಳು ಒಂದ
ಕ್ಕೊಂದು ಕಾಟಕೊಳ್ಳನ ಮು
ಡಿಕೊಂಡು ಕೇಂದ್ರವಾದ **ಅ**
ಬಿಂದುವಿನಲ್ಲಿ ಛೇದಿಸುತ್ತವೆ.
ಕಅಪ ಕೋನವು ಕಾಟಕೊಳ್ಳ
ನ ಪಾದ್ದರಿಂದ **ಕಅಪ**
ಕೋನಕ್ಕೆ **ಚಅಪ** ಕೋನವು
ಕಾಂಪ್ಲಿಮೆಂಟವಾದದ್ದು, ಅಂದರೆ ಕಾಟಕೊಳ್ಳನದ ಭಾಗಕ್ಕೆ
ಕಾಗುವ ಕೋನವು.



ಪಾರಿಭಾಷಿಕ ಶಬ್ದಗಳು.

೧ —**ಡಬ** ರೇಪೆಯು "ಭುಜಜ್ಯೆ"
೨—**ಅಡ** ರೇಪೆಯು "ಕೋಭುಜಜ್ಯೆ"
೩—**ಕಸ** ರೇಪೆಯು "ಸ್ಪರ್ಶರೇಪೆ"
೪—**ಪನ** ರೇಪೆಯು "ಕೋಸ್ಪರ್ಶರೇಪೆ"
೫—**ಅಸ** ರೇಪೆಯು "ಛೇದನರೇಪೆ"
೬—**ಅನ** ರೇಪೆಯು "ಕೋಛೇದನರೇಪೆ"

೭——ಆಕ ರೇಪೆಯು "ಶರ" (ವ್ಹರಸಡಸ್ಟೈನ)
ಆ ಇಫ ರೇಪೆಯು "ಕೋಶರ" (ಕೋವ್ಹರಸಡಸ್ಟೈನ)
ಇನ್ನು ಕಅಬ ಕೋನದ ತ್ರಿಕೋಣ ಮಿತಿಯ ಸಂಬಂಧಗಳನ್ನು ವಿವರಿಸುವಾ.

ಆಕ, ಅಬ ಸರಳ ರೇಪೆಗಳು ಕಅಬ ಕೋನದ ಬಾಹುಗಳು, ಅಚವು ಬ ಬಿಂದುವಿನಲ್ಲಿ ಕಗಳ ವರ್ತುಳದ ಪರಿಘಕ್ಕೆ ತಗಲುತ್ತದೆ. ಆ ಬಿಂದುವಿನಿಂದ ಬಕವು ಅಕಕ್ಕೆ ಲಂಬವಾಗಿ ತೆಗೆಯಲ್ಪಟ್ಟಿದೆ. ಕಅಬ ಕೋನಕ್ಕೆ ಸಂಕ್ಷೇಪಕ್ಕಾಗಿ ಗ ಯೆಂಬ ಹೆಸರನ್ನು ಕೊಟ್ಟರೆ ಬಡವು ಗ ಕೋನವ ಭುಜಜ್ಯವಾಗುತ್ತದೆ. ಬಅಗ ಕೋನಕ್ಕೆ ಗ ಯೆಂಬ ಹೆಸರನ್ನು ಕೊಟ್ಟರೆ, ಅಗಕ್ಕೆ ಬ ಬಿಂದುವಿನಿಂದ ಲಂಬವಾದ ಬಇಯು ಗ ಕೋನದ ಭುಜಜ್ಯವಾಗುತ್ತದೆ, ಅಂದರೆ ಗ ಕೋನದ ಕಾಂಪ್ಲಿಮೆಂಟಿನ ಭುಜಜ್ಯವು. ಆದ್ದರಿಂದ ಅದಕ್ಕೆ ಸಂಕ್ಷೇಪಕೊಕ್ಕರ ಗ ಕೋನದ ಕೋಭುಜಜ್ಯವೆಂಬುವ ರೂಢಿಯುಂಟು. ಅಡಬಇ ಆಕೃತಿಯು ಕಾಟಕೋನ ತ್ರಿಕೋನವಾದ್ದರಿಂದ ಇಇ = ಡಅ. ಕಾರಣ ಡಅ ಅಂದರೆ ಅಡವು ಗ ಕೋನದ ಕೋಭುಜಜ್ಯವು.

ಅಇ, ಡಬ ರೇಪೆಗಳು ಸಮಾಂತರ ಸರಳರೇಪೆಗಳಾದ್ದರಿಂದ ಇಅಬ = ಅಬಡ ಆದ ಪ್ರಯುಕ್ತ ಅಡ ಸರಳರೇಪೆಯು ನ ಕೋನದ ಭುಜಜ್ಯವು, ಮತ್ತು ಡಬವು ಅದರ ಕೋಭುಜಜ್ಯವು.

ಟೀಪು——ಕಾಟಕೋನ ತ್ರಿಕೋಣದಲ್ಲಿ ಕಾಟ ಕೋನವನ್ನೂ ಗರ್ಣವನ್ನೂ ಬಿಟ್ಟು ಬಿಟ್ಟರೆ, ಉಳಿದ ಎರಡು ಕೋನಗಳ ಎದುರಿನ ಬಾಹುಗಳು ಅವುಗಳ ವಾರ್ಸ್ಟರ ಭುಜಜ್ಯಗಳಾಗು

ತ್ತಮೆ.

ಕಸ ನರಳ ರೇಪೆಯು **ಕ** ಬಿಂದುವಿನಲ್ಲಿ ಲಂಬಪಾದ ಕಾರಣ ಅದು, **ಪನ**ವು **ಪ** ಬಿಂದುವಿನಲ್ಲಿ ಲಂಬಪಾದ ಕಾರಣ ಅದು, ಇವೆರಡೂ **ಕಪಜಲ** ವರ್ತುಲಕ್ಕೆ ಸ್ಪರ್ಶರೇಪೆಗಳು. ಆದರೆ **ಮ** ಕೋನಕ್ಕೆ **ಕಸ** ಸ್ಪರ್ಶರೆಪೆಯೂಆದರೆ, **ಪನ**ವು ಕೋಸ್ಪರ್ಶರೇಪೆಯು. **ನ** ಕೋನಕ್ಕೆ **ಪನ**ವು ಸ್ಪರ್ಶರೇಪೆಯು **ಕಸ**ವು ಕೋಸ್ಪರ್ಶರೇಪೆಯು.

ಮ ಕೋನಕ್ಕೆ **ಅಸ**ವು ಛೇದನ ರೇಪೆಯು, **ಅನ**ವು ಕೋಛೇದನ ರೇಪೆಯು **ನ** ಕೋನಕ್ಕೆ **ಅನ**ವು ಛೇದನ ರೇಪೆಯು **ಅಸ**ವು ಕೋಛೇದನ ರೇಪೆಯು.

ಮ ಕೋನಕ್ಕೆ **ತಕ**ವು ಶರವು, **ಫಪ**ವು ಕೋಶವು, **ಟ** ಕೋನದ ವಿಷಯವಾಗಿ ಇದರ ವಿರುದ್ಧ ತೆಗೆದು ಕೊಂಡರೆ ಬೀರಿತು.

——೦——

New Poetry—Description of Spring.

ವಸಂತತುರ್ವರ್ಣನಂ

ಸುಮನೋವಿಪ್ರಚಯಂಗಳಂನಸುಗಿನಂ ಜೂತಾಖ್ಯಭರ್ಮಕ್ಷತೀ ।
ರಮಣಂ,ಮಾಧವಸಂನಿಧಾನದೆಪಲಂ ಸಂತರ್ಪಣಂಗೈಯಲ್ಕೆ ॥
ಗಮನಂದಂಡುಣಲಾಶುಕಪ್ಪಿಜವರಂವಕ್ಕಾಮ್ರಸಂಶೇಪವಂ ।
ನಮರಾರಾವಿತಷಂಟಿಕಾನಿಬಿಡನಿರ್ಘೋಪಂಬೊಲಿತ್ತಾಕುಕಿಲ್ಕೂ

(ಕಂದಂಗಳ್)

ಟನಸಿರಿ ಮಾಪಣಂಮೆಲ ಲೆನಗತ್ತಳ್ನಲ್ಲೆಯಿಂದೆನೋಡೆನೆಗಳಿವೆ ಟ್ಟನೆಪೊಂದೆಯಿಡುವಂತುಲಿಗುಂಪನಪ್ರಿಯಂಚಿಗುರನೊಲ್ಲೆನೆತಂಪಲದಿಂ ॥ ೭೦ ॥

ಗಳಿತವಿಪರ್ಣ್ಣಂ ಮೆಲುಗುಮ | ದಳಿಪೂವಡುಂಡುಮದೆನ್ನ ಪಾಲಿಗಡೆ
ತ್ತಂ ॥ ತಳಿರೆಕಾಯ್ದಿದ್ದೆನುತೆ ಕೋ ಕಿಳಮಡನುಡಿಯಿಕ್ಕೂಗಿಕೇ
ಳುವದಜನಂ ॥ ೭೧ ॥

ಸುಗುಣಂನಾನಾಗಿರೆಯುಂ, ವಿಗುಣಂವೀನಾಗಿಬಿಟ್ಟುಪೋದಪೆಯೆ
ನ್ನಂ ॥ ಮುಗುಳಂಬವಿಂಶುಪೇಳ್ವೆನೆ? ತೆಗೆ! ಯೆಂದಳಿಮುಳಿದುಪಾ
ಯ್ದುಮಾಮಾಮಲರಂ ॥ ೭೨ ॥

आर्या

त्वगुणं संगमकामं मामपि संत्यजसि निर्गुणी भवसि! ॥
त्वमनोभावः किमयं! चूतस्तुमेत्युत्पतत्यलिस्तास्मिन्। ७३

(ಕಂದಂ)

ಕೂರುಗುರಿಂದಂಕೀರಂ ಕೀರುವದಂತಿರ್ದ! ಪುಕ್ಕಿಕಕ್ಕಸಗೊಕ್ಕಿಂ ॥
ಹಾರೆಖಿಳ! ಹರಿವ್ರದೊಡಲಂ! ದಾರೆಂನಂಕಾವರೆಂದು ಪಂಣಾ
ಯ್ತಾಮ್ರಂ ॥ ೭೪ ॥

मत्तेभ

ವಿಯಭೋಮನ್ಮಥನಾಥ! ನೀಂಸುಖಿಯೆ? ಮಂತ್ರಿಕ್ಷೇಮಿಯೇನ್ಯೆ? ಸ
ಮೃ । ದ್ಧಿಯೆಸ್ಪೈನ್ಯಂ? ಧ್ವಜವಾಜಿಪಾರಣವರೂಥಂಭದ್ರಮೇ? ನೀ
ಗಲ ॥ ಕ್ಷಯಮಾಗಿರ್ಪಮೆ! ಕೈದುಬಿಲ್ಲ್ಪೆಗಳೆಂತೈಗೋಲ್ಗಳೀಡುಂ
ಟೆನಿ ೧ । ನಯಸಂಸ್ಥಾನದೊಳೆಂದುಕೇಳ್ವುದುಶುಕಂ ಮುಂಜೂಕ್ತಿ
ಯಿಂಮಾರನಂ ॥ ೭೫ ॥

ತಳಿವ್ರಗಾಯ್ನ ಸುವರ್ಣ್ಣವರ್ಣ್ಣಿ ತನಿವರ್ಣ್ಣಾಕ್ಕೀಗಿಲ್ಕಲರ್ಕ್ಕಿಂಯೋ
ಗ್ಯ । ಗಳಿವಿಂಡಲ್ಲಿ ಪಲಾಶರಕ್ತಫಲಶ್ರೀಮೀತಸುಶ್ಯಾಮುಪಾ ॥
ಳವರ್ಣ್ಣಂಗಳಿನ್ನೆದೆಮಾಪೆನೆಪ್ರಧಾಜಿತ್ರಾಪತೀಜಂಬೊಲು ।
ಳಿಮಾಗಾರಯೆಚ್ಚೈತ್ರನಿಂಗೊಪ್ಪಗಿತಾತಾರಾಬಲಂನೋಡೆನೆ ॥೭೬
ಸುವಸಾಲಂಸರಿಚ್ಚೈತ್ರನಿಂಗೆನೆಸುಚಿತ್ರಾಭಂ, ವಿತಾಖಾಂಕಿತಂ ।

ಪೊರೆಮೈ ಶಾಖಿನಿಗುಂ, ಸದಾರುಣಪಲಾಶಂಪ್ರೈತ್ಯರಾಜಂಗೆಯುಂ
ಸುರತೀಷ್ಟಂಶುಕಸದ್ವಿಜೇಷ್ಟಫಲದಂ ಮಾರಂಗೆಮೂಕಾಂತಗುಂ
ಸುರಪಂಗಂಸುರಭಿಪ್ರಮೋದಿಸುರಸಾರಂಭಾಂಕಸಂಸ್ಪರ್ಶನಂ
ಸುರಸಾಲಂಕೃತಿವರ್ಣನೀಯ ಮುರುಪದ್ಮತೃನ್ವಿತಂ ಪಸ್ಯವನ್
ನರಸಂಭಾವ್ಯಮುಮಾಗಿಯುಂ ಕಲಿತಮಂದಸ್ಪರ್ಶನಂ,ಮೂವಿ
ಚ್ಛರಿ!;ಛಾಯಾಪರಣಾಶ್ರಯುಂ ಬಗೆಯುತಚ್ಛಾಯಾಪರಾಂಶು
ತೀ । ಕರಣಂ;ಪೂಷಪ ದುರ್ಗಶೋಭಿ ಮಧುಮೋದಾಭಾಸು

ಳಿಪ್ರಿಯಂ ॥ ೭೮ ॥

ಕಂದಂ

ಮಾಗಾಯ್ದೊಂಚಲ್ ತೂಗುಗು, । ಮಾಗಾಯೆಲರಿಂದೆತೂಕದಿಸುತ
ತೆಬಿಸಿಲ್ ॥ ತಾಗಲ್ ಮನುಜಂ;ತೊಪ್ಪನೆ, । ಮಾಗಿದಪಣ್
ಳುಪಂತೆರೆಳಾಂಪಿಸಿಬೀಳ್ಗುಂ ॥ ೭೯ ॥

ಸಂಕೀರ್ಣ

ಪನಸೋಜ್ಜ್ವಲಜಂಬವಮಾರುತಶ್ರಿತಪಯಂಶ್ರೀನೀಲಸುಗ್ರೀವಕಂ ।
ವಿನಮಲ್ಲಕ್ಷ್ಮಣಮುಖ್ಯನುಂ ಕುಶಲಪಕ್ಷಾಕ್ಷಜಾತಿಶೋಭಾಪಹಂ
ಷನತಾಲಾವಳಿಸದಕ್ಷಯುಂ,ಖರಕರಪ್ರತ್ಯೂಹ ವಿಧ್ವಂಸಿ,ಕಾಂ
ಚನಸಾರಂಗಕಸಂಪದಪ್ರಿಯಮುಸಾರಾಮಂಕರಂರಂಜಿಕುಂ॥

ಚಾಕೀರ್ಣಿ

ನವಪಲಕುಳಚಂಚಚ್ಚಂಪಗಪಚ್ಚೀಲ್ಪಿಡಿಸ
ಲ್ಲವಿತಕುಸುಮಿತತರ್ಪಚ್ಛಾಲಭಿಕಾಂಪೇಯಗಳ್,ಚಿ
ತ್ತವನೆಳೆವನಸುಗಂಧೀಸಂಚಯಂಬೀವೆತೀವಿ ।
ತ್ತವನದೊಳಲ್ತುಪಾಮೋದಂ ಸುಖಪಾವಿನೋದಂ ॥ ೮೦

ಕಂದಂ

ಪನ್ನಂಪಸೊಂಪಾಗಗ ತ್ಯುನ್ನತ್ತತೆಯಿಂದೆಕಂಟಕಂಗೈದೆಪೊ

ತನ್ಮಹದಭಘಲದಿಂದಂ ಜನ್ಮಿಸಿದೆವು ಕಂಟಿಕಿಫಲಕುಜನಿಯೊಳೀಗ
ಳ್ ॥ ೮೨॥
ಯದತಿಚಿಂತಾಭರದಿಂ, ನೊಂದುಜಪಿಸುತಚ್ಚುತಾಂಪ್ರಿಯಂ ಮು
ಕ್ತಿಯನೇ ॥ ಪೊಂದಲ್ಲೊಲ್ಲೀಲುತ್ತುಗ್ರತ, ಪಂದಾಳ್ದಿಹಪಲ್ತೆಪೀನಪ
ಲಸಘನಂಗಳ್ ॥ ೮೩ ॥

॥ ತರಳಂ ॥

ಯುವತಿಯಂಗವಸೂಚಿಕುಂ ನವನಾಗವಲ್ಲರಿ ತನ್ನವ ।
ಬ್ಬುವಿಕೆಯಿಂದವಳಪ್ಪವಂದವ ನೋಡಿದರ್ಗೆಲವಳ್ಳಿಯಾ ॥
ಥವಳಕೋಮಳಕಾಂತಪಲ್ಲವಕಾಂತಿ ನೋಳ್ಪಮನೋರಮಾ ।
ಥವಳಕೋಮಲಕಾಂತನವ್ಯಕಟಾಕ್ಷಸಂಸ್ಮರಣಪ್ರದಂ ॥ ೮೪ ॥

मत्तेभ

ಯೆಳೆನಿ! ರಂಮನಮಾರೆಪಾನಿಸಲೊ! ತಾಂಬೂಲೀಲಸತ್ಪಲ್ಲವಂ ।
ಗಳಕ್ಕೈಕೊಳ್ಳಲೊ! ಮಾವನೇರಿತಪಿವಣ್ಣಿಂಗಿಂಚಲ್ಗಳಂಕೊಯ್ಯಲೋ! ।
ತಳಿರಂಕೈಯೊಳೆತಾಳಲೋ! ಪಲಸುಪಂಗಣಂಮೆಲ್ಲಲೊ! ಜಾಂಬವಂ ।
ಗಳನಾಂತಿನ್ನಲೊ! ಮೂಸಲೋ! ನವಸುಗಂಧೀಪುಷ್ಪಗುಚ್ಛಂಗಳಂ
॥ ೮೫ ॥
ಯೆನಿಸಿತಂನಂಸಾರ್ದರಮನೋಹರಣಂಗೈವುದಲ್ಲದೇ ॥

विद्युधप्रिया

ಕುಂದಪಾಟಲಚಂಪಕಾಮ್ರಶಿರೀಷಕೇಸರಮಂಜುಳಾ ।
ಮುಂದಕಾಂಚನಕರ್ಣಿಕಾರಸುಬಿಲ್ವಜಂಬುಲಮಲ್ಲಿಕಾ ॥
ಸುಂದರಂಸುಮಬಂಧುರಂಮನಮಂದಿರಂನಡೆತಂದರಾ ।
ನಂದನಂನರುಗಂಪಿನಿಂತನಿದಂಪಿನಿಂಸಲೆಸೊಂಪಿನಿಂ ॥ ೮೬ ॥

मत्तेभ

ಜಡಸಾಂಪರ್ಗಿಕದೋಷದಿಂನಳಿನಿ ತತ್ಕಾಲಕೃಥಃಪಾತಮಂ ।

ಪಡೆದುತ್ಫುಲ್ಲಮುಖಾಂಬುಜಂಕೊರಗೆ, ತತ್ಕಾಂತಿನಷ್ಟಾಂಗಯು
ಬಿಡಿಯಲ್ಕಾಧಪಭಕ್ತಿಯಂನಮ್ರತಪಂನಿತ್ತಂಗಡಾ! ಪಂಕದಿಂ।
ಡೊಡನಿಂದುದ್ಧರಿಸಿರ್ದನೀಕ್ಷಿಸೆನೆಪುಲ್ಲಾಬ್ಜಂಗಳಿಂರಾಜಿಪಳ್ ಲ
ತಟಿನೀಸೀತಳವಾರಿಮಜ್ಜನೆಗಳಂ, ಶ್ರೀಖಂಡಲೇಪಂಗಳಂ ।
ಪಟವಾಸಾದಿಸುಗಂಧಪಂ, ಧವಳಿಮಾಂಚತ್ಸೂಕ್ಷ್ಮವಸ್ತ್ರಂಗಳಂ
ವಿಟಪೀಮೂಲವಿಹಾರವಂ ಸುರಭಿಪಾನೀಯಾನುಪಾನಂಗಳಂ
ಸ್ಫುಟಗಂಧಪೆಜನಂಗಳಂನಿರೆಪಸಂತಂಕಾಮಿಸಿತ್ತ್ರೈಜನಂ ॥೬
ಈ ವರ್ಣನೆಯು ಯಿಂನೂ ಮುಂದೆ ವಸಂತಕಾಲ ವ
ಯೂದಾಗ ಸಾಗೀತು ಸದ್ಭಕ್ಕೆ ಇಷ್ಟಕ್ಕೆ ಸಾಕುಮಾಡುತ್ತೆ

ಧೋಂಡೋ ನರಸಿಂಹ ಮುಠಬಾಗಲ
ನಿ।। ಧಾರವಾಡ ಹಯಸ್ಕೂಲ

Structure of the Dravidian Languages

ದ್ರವಿಡ ಭಾಷೆಗಳ
ವ್ಯುತ್ಪತ್ತಿಯು.

ಹಳೆಗನ್ನಡ ಭಾಷೆಯು ಬಹು ಕಾಲದಿಂದ ಪ್ರೌಢ
ಕ್ಕೆ ಬಂದು ಬಗೆ ಬಗೆಯ ಸುರಸ ಗ್ರಂಥಗಳು ಅದ
ಬರಿಯಲ್ಪಟ್ಟಿದ್ದಾಗ್ಯೂ, ಈಗ ನಡೆಯುವ ಹೊಸಗನ್ನಡ ಇ
ಕೇವಲ ಬಾಲ್ಯಾವಸ್ಥೆಯಲ್ಲಿಯೇ ಇರುತ್ತದೆಂದು ಹೇಳಬಹು
ಹಳೆಗನ್ನಡ ಲಿಪಿಯಿಂದ ಈಗಿನ ಲಿಪಿಯ ಬಂದಾಗ
ಕಾಲದಿಂದಲಾ ಲಿಪಿಯ ವ್ಯತ್ಯಹಾರವು ನಡಿದಪೆಂಬುವದು
ಜವು. ಆದರೆ ಹೊಸಗನ್ನಡ ಭಾಷೆಯಲ್ಲಿ ಗ್ರಂಥಗಳು
ತ್ತಿಪ್ಪತ್ತು ವರ್ಷಗಳೀಚೆಯಲ್ಲಿ ಮಾತ್ರ ಜನ್ಮ ಪಡಿದವು,
ದರಿಂದ ಈ ಭಾಷೆಯು ಯಿನ್ನೂ ಸ್ಥಿರವಾದ ಸ್ವರೂಪವ

ಂದಿರುವದಿಲ್ಲ. ಸಂಧಿಗಳನ್ನೂ ಶಬ್ದ ಸ್ವರೂಪಗಳನ್ನೂ
ಧವಾಕ್ಯಗಳನ್ನೂ ಕುರಿತು ಬೇರೆ ಬೇರೆ ಜನರ ಮತಗ
ಬೇರೆ ಬೇರೆ ಪುಂಟು. ಒಬ್ಬನು ಬರಿದದ್ದು ಮತ್ತೊ
ಗೆ ಸಮ್ಮತವಾಗುವದಿಲ್ಲ. ಯಾವದೊಂದು ವಾದಗ್ರಸ್ತ
ಯವನ್ನು ಕುರಿತು ಯಿಂಥವರಿಬ್ಬರ ಮತವು ಮೊಂದೇ
ಟೆಂದು ತೋರಿಸುವದು ಕಷ್ಟವಾಗಿದೆ. ಇಂಥಾ ಸ್ಥಿತಿ
ಂದ ಬಹು ದೊಡ್ಡ ಗೊಂದಲವು ಪೊರಮಿರುತ್ತದೆ. ವಿದ್ಯಾ
ತರೆಂದೆನಿಸಿ ಕೊಳ್ಳುವಂಥ ಕನ್ನಡಿಗರು ತಾವು ಸ್ವತಃ ಕ
ತ ಗ್ರಂಥಗಳನ್ನು ಓದಲಿ ಓದದೆ ಯಿರಲಿ, ಸ್ವಭಾಷೆ
ಲ್ಲಿ ಗ್ರಂಥ ಬರೆಯುವ ಅಭ್ಯಾಸವನ್ನು ಮಾಡಿರಲಿ ಮಾಡ
ಯಿರಲಿ, ಅವರು ತಮ್ಮವ್ವಕ್ಕೆ ತಾವು ಭಾಷಾ ಪಂಡಿತ
ದೆಂಬಿಸುತ್ತಾರೆ. ಇಂಥಾ ಸ್ಥಿತಿಯಲ್ಲಿ ನಮಗೆಲ್ಲರಿಗೂ ತ
ಟ್ಟು ಸಹಾಯವಾಗಬೇಕೆಂಬ ಪರ್ಯಾಲೋಚನೆಯಿಂದ ರೆ
ವಾ ಕಾಲ್ಡ್‌ವೆಲ್ ಯೆಂಬ ಶೋಧಕರು "ಪ್ರಾವೀಡಿಯನ್
ಪ್ಯಾರೇಟಿವ ಗ್ರಾಮರ" ಯೆಂಬ ಬೆಲೆಯುಳ್ಳ ಪುಸ್ತಕದ
ಸಂಗ್ರಹಿಸಿಟ್ಟ ಶೋಧಗಳನ್ನು ಸಂಕ್ಷೇಪವಿಂದ ಭಾಷಾಂ
ಸಿ, ಈ ಪತ್ರಿಕದಲ್ಲಿ ನಿಬಂಧರೂಪವಾಗಿ ಪ್ರಕಟಿಸುವ ಸಾ
ವನ್ನು ನಾವು ಕೈಕೊಂಡಿರುತ್ತೇವೆ. ಆದರೆ ಇದರಲ್ಲಿ ನಾ
ನಮ್ಮ ಸ್ವಂತ ವಿಚಾರಗಳನ್ನು ಸಹ ವ್ಯಕ್ತ ಪಡಿಸುವೆವು.
ನಿಬಂಧಗಳಲ್ಲಿ ಸಂಶಯಗ್ರಸ್ತವಾಗಿ, ಇಲ್ಲವೆ ಅಸಂಬದ್ಧ
ಗಿ ತೋರಿದಂಥ ಪ್ರಸಕ್ತಿಗಳನ್ನು ಕುರಿತು ಮಾಸ್ತರ ಜ
ರ ಇತರರೂ ನಮಗೆ ಆಗಾಗ್ಗೆ ಪತ್ರಗಳನ್ನು ಬರೆಯುವ
ಮ ಕೋರುತ್ತೇವೆ.

ಈ ಕೆಲಸಕ್ಕೆ ಕೈ ಹಾಕುವ ಹಪಣಿಕೆಯಿಂದಲೇ ಹಿಂಧಿ

ನ ಯೆರಡು ಅಂಕಗಳಲ್ಲಿ ಪ್ರಸಿದ್ಧಿಸಿದ ನಿಬಂಧದಲ್ಲಿ ದ್ರ
ವಿಡಭಾಷೆಗಳ ಮೂಲವನ್ನು ಕುರಿತು ನಮ್ಮ ವಿಚಾರಗಳನ್ನು
ಪ್ರಕಟಿಸಿರುತ್ತೇವೆ. ಆ ನಿಬಂಧದಲ್ಲಿ ದ್ರವಿಡ ಭಾಷೆಗಳಿಗೂ
ಸಂಸ್ಕೃತಕ್ಕೂ ಯೆಷ್ಟು ಮಾತ್ರವೂ ಸಂಬಂಧವಿಲ್ಲದೆ, ಆ ಭಾ
ಷೆಗಳು ಸಿಥಿಯನ್ ವರ್ಗದ ಭಾಷೆಗಳಾಗಿರುತ್ತವೆಂಬದನ್ನು
ಸಿದ್ಧ ಮಾಡಿದ್ದೆವೆ.

ದ್ರವಿಡ ವರ್ಣಮಾಲೆಗಳು.

ಯಾವತ್ತು ದ್ರವಿಡ ಭಾಷೆಗಳಲ್ಲಿ ಕೂಡಿ ಈಗ ಮೂ
ರು ವರ್ಣಮಾಲೆ ವ್ಯವಹಾರದಲ್ಲುಂಟು; ಅವು — ಮಲಿಯಾ
ಳಂ, ತೆಲಗು ಅಥವಾ ಕನ್ನಡ, ತಮಿಳು. ತೆಲಗು ಕನ್ನ
ಗಳ ವರ್ಣಮಾಲೆಯು ಮೊಂದೇ ಇರುತ್ತದೆ. ತೆಲಗಿನಲ್ಲಿ ಕ
ಲವು ಅಕ್ಷರಗಳ ಆಕಾರಗಳಲ್ಲಿ ಸ್ವಲ್ಪು ಭೇದವಿರ್ವಾಗ್ಯೂ ಆ
ಪ್ಪರಿಂದಲೇ ಆ ಭಾಷೆಯ ವರ್ಣಮಾಲೆಯು ಬೇರೆಯೆಂದು
ಹೇಳ ಕೂಡದು. ತುಳುವರು ವಾಡಿಕೆಯಾಗಿ ಮಲಿಯಾಳ
ಲಿಪಿಯನ್ನು ಉಪಯೋಗಿಸುತ್ತಾರೆ. ಆದದರಿಂದ ತಮಿಳ, ತೆ
ಲಗು, ಕನ್ನಡ, ಮಲಿಯಾಳ, ಇವ್ವೆದು ಮುಖ್ಯ ದ್ರವಿಡ
ಭಾಷೆಗಳಿಗೆ ಕೂಡಿ ಮೂರೇ ಲಿಪಿಗಳುಂಟೆಂದು ಹೇಳ ಬ
ಹ್ದು.

ಆದರೆ ತೆಲಗು ಕನ್ನಡ ಭಾಷೆಗಳಿಗೂ ತಮಿಳಕ್ಕೂ ಹಳೆ
ಲಿಪಿಗಳು ಬೇರೆಯುಂಟು. ಆ ಲಿಪಿಗಳಿಂದಲೇ ಈಗ ನಡೆ
ಯುವ ಲಿಪಿಗಳು ಹುಟ್ಟಿರುತ್ತವೆ. ತಮಿಳ ಭಾಷೆಯ ಬ
ರಹಿಯ ಲಿಪಿಗೆ "ಗ್ರಂಥಂ" ಯೆಂಬ ಹೆಸರುಂಟು. ಪ್ರಾಚೀ
ನ ಸಂಸ್ಕೃತ ಗ್ರಂಥಗಳೆಲ್ಲ ಇದೇ ಲಿಪಿಯಿಂದ ಬರಿಯಲ್ಪ
ಟ್ಟವೆ. ಮಲಿಯಾಳ ಲಿಪಿಯಾದರೂ ಈ ಗ್ರಂಥಂ ಯೆಂಬ

ಲಿಪಿಯಿಂದ ಹುಟ್ಟಿರುತ್ತವೆ. ಆದರಿಂದ ಯಾವತ್ತೂ ದ್ರವಿಡ ಭಾಷೆಗಳಿಗೆ ಹಳೆಗನ್ನಡ (ಅಥವಾ ಹಳೆದೆಲಗು), ಗ್ರಂಥಂ, ಇವೆರಡೇ ಮೂಲ ಲಿಪಿಗಳುಂಟು. ಇವೆರಡು ಲಿಪಿಗಳಾದರೂ ಸ್ವತಂತ್ರವಲ್ಲ. ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೆ ದೇವನಗರೀ ಮೂಲ ಲಿಪಿಯಿಂದ ಇವೆರಡೂ ಹುಟ್ಟಿರತ್ತವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಉದಾಹರಣಾರ್ಥವಾಗಿ ಕ, ಗ, ನ, ಲ, ಹ, ಮುಂತಾದ ಕನ್ನಡ ಅಕ್ಷರಗಳ ಆಕಾರಗಳ ಬಾಲಬೋಧ ಅಕ್ಷರಗಳ ಆಕಾರಗಳಿಗೆ ಬಹಳವಾಗಿ ಹೊಂದುತ್ತವೆಂಬುವದು ಸಾಮಾನ್ಯತರದ ತಿಳುವಳಿಕೆಯುಳ್ಳವರಿಗೆ ಸಹ ಗೊತ್ತಿರಬಹುದು. ನೋಡಿದರೆ ಇವೆರಡೂ ಲಿಪಿಗಳು ಯೋರಡೆರಡು, ಮೂರು ರೂಪಾಂತರಗಳಾದ ನಂತರ ಫಲಿತವಾಗಿರುತ್ತವೆ. ಪುರಾತನದ ಕನ್ನಡ ದೇವನಗರೀ ಶಿಲಾಲಿಪಿಗಳ ಅಕ್ಷರಗಳನ್ನು ಮೊಂದಕ್ಕೊಂದು ಹೊಂದಿಸಿ ನೋಡಿದರೆ ಅವೆರಡೂ ಒಂಸೇ ಯೆಂದು ತತ್ಕಾಲವೇ ನಿಷ್ಕರ್ಷವಾಗುತ್ತದೆ. ಆ ಕಾರಣ, ದ್ರವಿಡ ಭಾಷೆಗಳು ಸಂಸ್ಕೃತದಿಂದ ಹುಟ್ಟಿದೆ ಇದ್ದಾಗ್ಯೂ, ಆ ಭಾಷೆಗಳ ಲಿಪಿಗಳೆಲ್ಲ ಸಂಸ್ಕೃತ ಲಿಪಿಯೆಂದು ಹೇಳಲ್ಪಡುವ ಪುರಾತನದ ದೇವನಗರೀ ಲಿಪಿಯಿಂದ ಹುಟ್ಟಿರುತ್ತವೆಂಬದಕ್ಕೆ ಸಂದೇಹವಿಲ್ಲ.

ತೆಲಗು ಕನ್ನಡ—ಈ ವರ್ಣಮಾಲೆಯ ಕ್ರಮವೂ ಉಚ್ಚಾರಗಳೂ ದೇವನಗರೀ ವರ್ಣಮಾಲೆಯಂತೆ ಇರುತ್ತವೆ. ಆದರೆ ಒ, ಓ, ಯೆಂಬವೆರಡು ಸ್ವರಗಳೂ ಳ ಯೆಂಬ ವ್ಯಂಜನವೂ ಈ ಲಿಪಿಯಲ್ಲಿ ಹೆಚ್ಚುಂಟು. ಆದಾಗ್ಯೂ ಳ ಕಾರವು ವೇದದಲ್ಲಿ ಉಪಲಬ್ಧವಿದೆ.

ಮಲಿಯಾಳ—ಈ ವರ್ಣಮಾಲೆಯು ಸಾಧಾರಣವಾಗಿ

ಮೇಲಿನ ವರ್ಣಮಾಲೆಗೆ ಹೊಂದುತ್ತದೆ. ಆದರೆ ಅದರಲ್ಲಿ "ಳ್ಳ" ಯೆಂಬಯೊಂದು ತಮಿಳವ್ಯಂಜನವು ಹೆಚ್ಚಿಗಿರುತ್ತದೆ. ಮತ್ತು ಹ್ರಸ್ವ ದೀರ್ಘ ಎಕಾರ ಒಕಾರಗಳು ಒಂದೊಂದೆ; ಈ ಅಕ್ಷರಗಳಿಂದ ತೋರಿಸಲ್ಪಡುತ್ತವೆ.

ಆದರೆ ವರ್ಗದ್ವಿತೀಯ ಚತುರ್ಥಾಕ್ಷರಗಳೂ, ಶ, ಷ, ಹ, ಯೆಂಬ ಊಷ್ಮ ವರ್ಣಗಳೂ ದ್ರಾವಿಡ ಭಾಷೆಗಳಲ್ಲಿ ಶೇರಿದ ಸಂಸ್ಕೃತ ಶಬ್ದಗಳಿಗಾಗಿ ಈ ವರ್ಣಮಾಲೆಗಳಲ್ಲಿ ಶೇರಿಸಲ್ಪಟ್ಟಿರುತ್ತವೆ. ಅಂದರೆ ನಿಜ ದ್ರಾವಿಡ ಶಬ್ದಗಳಲ್ಲಿ ಈ ವರ್ಣೋಚ್ಚಾರಗಳು ಇರುವದಿಲ್ಲ. ಆ ಕಾರಣ ಭಂದ, ಭಳಿ, ಲೆಖ್ಖ, ಹಳೆ, ಶೇರು, ಮುಂತಾದ ದ್ರಾವಿಡ ಶಬ್ದಗಳ ಶುದ್ಧೋಚ್ಚಾರಗಳು ಹಂದ, ಚಳಿ, ಲೆಕ್ಕ ಪಳೆ, ಸೆರು, ಮುಂತಾದವುಗಳೆಂದು ತಿಳಿಯತಕ್ಕದ್ದು.

—o—

Departmental Notices.

ನೋಟೀಸು.

ಧಾರವಾಡ ಟ್ರೇನಿಂಗಕಾಲೇಜದಲ್ಲಿ ಹೊಸವಿದ್ಯಾರ್ಥಿಗಳನ್ನು ತೆಗದುಕೊಳ್ಳುವದಕ್ಕೋಸ್ಕರ ಪ್ರವೇಶಪರೀಕ್ಷೆಯು ಇನ್ನು ಮೇಲೆ ಆಗಲಿಕ್ಕಿಲ್ಲ. ಮೆಂತಲೂ, ಮುಲಕಪರೀಕ್ಷೆಯೇ ಪ್ರವೇಶ ಪರೀಕ್ಷೆಯೆಂದು ತಿಳಿಯತಕ್ಕದ್ದೆಂತಲೂ, ನಿಯಮಗಳು ವಿಧಿಸಲ್ಪಡತಕ್ಕವಾದ್ದರಿಂದ, ಸದರ ಕಾಲೇಜದಲ್ಲಿ ಅಭ್ಯಾಸಮಾಡವದಕ್ಕಾಗಿ ಬರಲಿಚ್ಛಿಸುವ ಉಮೇದವಾರ ಜನರಿಗೆ ತಿಳಿಯಪಡಿಸುವದೇನಂದರೆ, ಅವರು, ತಾವು ಸದ್ಭಥರಾಗಿಯೂ, ಮೆಂಗರಹಿತರಾಗಿಯೂ, ಪ್ರಕೃತಿ ಜನ್ಯರೋಗ ರಹಿತರಾಗಿಯೂ, ಪೂರ್ಣ (೧೮) ಅಥವಾ (೧೮) ವರುಷಗಳಿಗಿಂತ

ಕ್ಷಿನ ವಯಸ್ಸಿನವರಾಗಿಯೂ, ಇಷ್ಟೇಪೆಂದು ತಮ್ಮ ತಮ್ಮ
ಸ್ತ್ರರರ, ತಮ್ಮ ತಮ್ಮ ತಾಲೂಕಿನ ಮಾಮುಲೇದಾರ ಮಾ
ಲಕರೇರ, ಅಥವಾ ಸಬಾರಡಿನೇಟ ಜಡಜರ ಸರಟೀಫಿಕೀ
ಗಳ ಸಹಿತ ಹಾಗು, ತಮ್ಮ ತಮ್ಮಗೆ ದೊರತ ಮುಲಕೀ
ಟೀಫಿಕೀಟುಗಳ ಸತ್ಯ ನಕಲುಗಳ ಸಹಿಂತ (ಸತ್ಯನಕಲುಮೆಂದರೆ
ಮ ಖರೇ ನಕಲೆಂಬುವದಕ್ಕೆ ಮೇಲೆ ಬರೆಯಲ್ಪಟ್ಟ ಯಾವ
ದರೊಬ್ಬ ಉದ್ಯೋಗಸ್ಥನ ಸಹಿ ಉಳ್ಳದ್ದು) ತಮ್ಮ ತಮ್ಮ
ರ್ಜಿಗಳನ್ನು ಪ್ರಿನಸಿಪಾಲರ ಕಡೆಗೆ ಬರುವ ಅಕ್ಟೋಬರ
ನೇ ತಾರಿಖಿನೊಳಗೆ ಕಳುಹಿಸಲ್ಪಟ್ಟಲ್ಲಿ ವಿಚಾರವಾಗಿ,
ಲೇಜದಲ್ಲಿ ತೆಗದು ಕೊಳ್ಳುವದಕ್ಕೆ ಪಸಂದ ಮಾಡಲ್ಪಟ್ಟ
ಮೋದವಾರರನ್ನು ಪಗಾರೀ ವಿದ್ಯಾರ್ಥಿಯರಂತೆ ತೆಗೆದು,
ಳ್ಳಲಾದೀತು. ಸದರ ವಿದ್ಯಾರ್ಥಿಯರ ಹೆಸರುಗಳನ್ನು
ಮಂಬರ ೭ ನೇ ತಾರೀಖಿಗೆ ರಾಖಿಲ ಮಾಡಿಕೊಳ್ಳೋಣವ
ಬರುವದು. ಸದರ ಕಾಲೇಜದಲ್ಲಿ ವಿದ್ಯಾರ್ಥಿಯರ ಯೋ
ತಾನುಸಾರವಾಗಿ ಅಂದರೆ ಗುಣಗಳ ಸಂಖ್ಯೆಪ್ರಕಾರ (೬)
ಪಾ (೭) ರೂಪಾಯಿ ಸ್ಕಾಲರ್ಶಿಪ ಕೊಡಲ್ಪಡುವದು. ಅರ್ಜಿ
ರನು ತಮ್ಮ ತಮ್ಮ ಪತ್ತೆಗಳನ್ನು ಸ್ಪಷ್ಟವಾಗಿ ಬರದ
ಅವರಿಗೆ ಉತ್ತರಗಳು ಹಪ್ಪಲೆ ಮುಟ್ಟುವವು. ತಾರೀಖು
ನೇ ಜುಲಾಯಿ ೧೮೬೭ ಇಸವಿ

B. K. Hooligoal.

ಪ್ರಿನಸಿಪಾಲ, ಟ್ರೇನಿಂಗಕಾಲೇಜ ಧಾರವಾಡ.

— o —

ನೋಟೀಸು.

ಕೊಡೋದರಲ್ಲಿ ಬರುವದೇನೆಂದರೆ ಥಾನವಾಡ ಟ್ರೇನಿಂಗ
ಕಾಲೇಜದ ಪಾರ್ಸಿಕ ಸರಟೀಫಿಕೇಟ ಪರೀಕ್ಷೆಯು ಬರುವ ಆ
ಕ್ಟೋಬರದ ೮ ನೇ ತಾರೀಖಿನ ದಿನಸ ಪ್ರಾರಂಭವಾಗುವ
ದು. ಹೊರಗಿನಿಂದ ಬರತಕ್ಕಂಥವರು ಮೇಹರಬಾನ್ ಇ
ನಸ್ಪೆಕ್ಟರ ಸಾಹೇಬರವರ ಅಪ್ಪಣೆಯನ್ನು ಹೊಂದಿ ನಾಲ್ಕು
ದಿವಸ ಪೂರ್ವದಲ್ಲಿ ಸದರ ಕಾಲೆಜದ ಪ್ರಿನಸಿಪಾಲರ ಕಡೆ
ಹಾಜರಾಗತಕ್ಕದ್ದು. ಹೀಗೆ ಮಾಡದಲ್ಲಿ ಅವರ ಹೆಸರಗಳು
ರೀಕ್ಷೆಯ ಲಿಷ್ಟಿಗೆ ದಾಖಲ ಮಾಡಿಕೊಳ್ಳಲ್ಪಡವವು ತಾರೀಖು
ನೇ ಆಗಷ್ಟ ೧೮೭೬ ಇಸವಿ.

E. K. Hooligoal.
ಪ್ರಿನ್ಸಿಪಾಲ ಟ್ರೇ. ಕ

Correspondence.

ಪತ್ರವ್ಯವಹಾರ.

ಮೇಹರಬಾನ ರಾವ ಸಾ|| ಕರ್ನಾಟಕ ಶಾಲಾಪತ್ರಿಕೆ
ಎಡೀಟರರ ಚರಣ ಸನ್ನಿಧಾನಕ್ಕೆ

ಸೇವಕ ಧೊಂಡೋಗಂಗಾಧರ ಲಿಮುಯೆ ಸ್ಕೂಲಮಾಸ್ತರ
ಲಾ ಆಲೂರ ಈತನ ವಿಜ್ಞಾಪನೆ——ಕೆಳಗೆ ಬರೆದ ಪಂಕ್ತಿಗಳ
ತಮ್ಮ ಪತ್ರಿಕದಲ್ಲಿ ಸ್ಥಳ ದೊರಿಯುವಂತೆ ಮಾಡಿಸುತ್ತೇನೆ.
ಮಿತ್ರರಾದ ರಾ|| ರಾ|| ಬಾಳಾಜಿಗೋಪಾಳ ಸಕ್ಕರಿ
ವರು ಸನ್ನ ೧೮೭೬ ಇಸವಿ ದಶಂಬರ ತಿಂಗಳ ಶಾಲಾ
ಪ್ರತಿಕದಲ್ಲಿ ಶಬ್ದವ್ಯುತ್ಪತ್ತಿಯನ್ನು ಬರೆಯರುತ್ತಾರೆ. ಅದರ
(अध्ययन) ಮತ್ತು (आसन) ಈ ಎರಡು ಶಬ್ದಗಳ ವ

ಸ್ಟಿದಶಿಂದ ನನಗೆ ಸಂಶಯ ಬಂದಿರುತ್ತದೆ.

ಪರು (अध्ययन) ಈ ಶಬ್ದವು अ+आधि ಅಂದರೆ ಅ
ಭ್ಯಾಸ ಮಾಡು ಎಂಬ ಧಾತುವಿನಿಂದ ಹುಟ್ಟಿರುತ್ತದೆ. ಅಂ
ು ಬರೆದಿರುತ್ತಾರೆ ಆದರೆ आधि ಇದು ಧಾತು अ ಅಲ್ಲ ಇ
ಿ ಇರಲಿ ಮತ್ತು आधि ಇದಕ್ಕೆ अ ಈ ಉಪಸರ್ಗ
ಸಿದರೆ आधि ಅಂತಾಗಿ ಈ ರೂಪದ ಮುಂದೆ ಯಾವ
ತ್ಯಯ ಕೂಡಿದರೂ अध्यायन ಅಂತಾಗಬೇಕು (अध्ययन)
ುತಾಗಲಾರದು. ಇದರಂತೆ (आसन) ಈ ಶಬ್ದವು (अ+
ಅಂದರೆ ಕೂಡು ಎಂಬ ಧಾತುವಿನಿಂದ ಹುಟ್ಟಿರುತ್ತ
ಎಂತ ಬರೆದಿರುತ್ತಾರೆ. ಆದರೆ आ+सि=आसि ಅಂ
ರೂಪ ಆಗಿ ಈ ರೂಪಕ್ಕೆ ಯಾವ ಪ್ರತ್ಯಯ ಕೂಡಿಸಿ
ಿ (आसन) ಅಂತಾಗುವದು ಅಸಂಭವವಾಗಿ ಕಾಣುತ್ತ
ಆದರೆ ಹೀಗಾಗಲಿಕ್ಕೆ ಏನಾದರೂ ಆಧಾರವಿದ್ದರೆ ಅದ
ಬರೆದು ತಿಳುಹಿಸುವಿರೆಂದು ಅಪೇಕ್ಷಿಸುತ್ತೇನೆ.

ಂಡಾವಕೃತ ಸಂಸ್ಕೃತ ಎಂಬದನ್ನೇ ಪುಸ್ತಕದ ಮೂರನೇ
ುತ್ರಿಯಲ್ಲಿ ೪೦ ನೇಪುಟ ಮತ್ತು ೧೯೧ ನೇ ಪುಟದಲ್ಲಿ
ವಂಭತ್ತನೇ ನಿಯಮದ ಕೆಳಗೆ ಹೇಳಿದ ನಿಯಮಗಳ
ಾರ)

ಧಿ+इ=अधी ಅಂದರೆ ಅಭ್ಯಾಸಮಾಡು
अधि+इ+अन
ಇ+अन (ಗುಣಸಂಧಿ)
अय्+अन = (अय् ಸಂಧಿ)
अयन (ಅಂತರೂಪವಾಗಿ)
अधि+अयन=अध्ययन (ಯಣ್ ಸಂಧಿಪ್ರಕಾರ)

आस् = ಅಂದರೆ ಕೂಡು

आस्+अन = आसन

ಈ ಪ್ರಕಾರ अध्ययन ಮತ್ತು आसन ಈ ಎರಡು ಪ
ಬ್ದಗಳ ವ್ಯುತ್ಪತ್ತಿ ಇರಬಹುದೆಂದು ನನ್ನ ಬುದ್ಧಿಗೆ ತೋರು
ತ್ತದೆ. ಬುದ್ಧಿವಂತರು ಈ ಯಿಡ್ಡಾ ಮತಗಳಲ್ಲಿ ಯಾವ
ಮತ ಖರೆ ಎಂಬುವದಕ್ಕೆ ತಮ್ಮ ಅಭಿಪ್ರಾಯವನ್ನು ಬರಿ
ಯ ಬೇಕು. ತಾ|| ೨೭ ಜೂನ ೧೮೭೯.

ಭೊಂಡೂ ಗಂಗಾಧರ ಲಿಮಯೆ
ಹೆಡ್ಡಮಾಸ್ತರ ತಾಲೂಕ ರೋಣ

— ೮ —

ಮಹಾರಾಜ ರಾ. ರಾ. ಕನ್ನಡ ಶಾಲಾಪತ್ರಕದ ಎಡ
ಟರ ಸನ್ನಿಧಾನಕ್ಕೆ——

ಬಿ. ವಿ. ಕಳೆದ ಏಪ್ರೀಲ ತಿಂಗಳದ ಮತಪತ್ರಿಕೆಯಲ್ಲಿ
ಮುಳಗುಂದ ಅ||ರು ಕೊಟ್ಟ ಲೆಖ್ಕದ ಉತ್ತರ ರೀತಿ ಸರಿ
ತಮ್ಮ ಕಡಿಗ ಕಳುಹಿಸಿದ್ದೇವೆ. ಇದನ್ನು ತಪ್ಪು ಕೈಯಲ್ಲಿ ಉ
ದ್ಭವಿಸುವ ಮತಪತ್ರಿಕೆಯಲ್ಲಿ ಮುದ್ರಿಸುವವರಾಗಿರೆಂದು ಬೇ
ಡಿಕೊಳ್ಳುತ್ತೇವೆ.

ಒಂದು ಹೊಲವಲ್ಲಿ ಜೋಳದ ರಾಶಿಯಾಗಿತ್ತು. ಅದ
ಮೇಟಿಯು ಬುಡದಿಂದ (೩) ಮೊಳ ಎತ್ತರವಾಗಿ ಆ ಮೇಟ
ಗೆ ಪರು (ಗುಂಪೀ) ಹಾಕಲ್ಪಟ್ಟಿತ್ತು ಮತ್ತು ಆ ರಾಶಿಯುಂ
ಆಕ್ರಮಿಸಲ್ಪಟ್ಟ ನೆಲದ ಪರೀಘದ ವ್ಯಾಸವು ೧೨ ಮೊಳದ
ಗಿದೆ. ಆದರೆ ಈ ಮೇರೆಗೆ ಇರುವ ಆ ಜೋಳದ ರಾಶಿಯ
ಷ್ಠನಮೊಳೆಪ್ಪುತ್ತ

ಸದರ ಮೇಟಿಯ ಅಳತೆಯು ಹೇಳತಕ್ಕದ್ದಿದ್ದು ಪ್ರಶ್ನೆ

ಯಲ್ಲಿ ಹೇಳಲಿಲ್ಲ. ಆದುದರಿಂದ ನಾವು ಸದರ ಮೇಟಿಯು ಬದಲಾಗಿ ಒಂದು ಸರಳ ರೇಷೆಯನ್ನು ಕಲ್ಪಿಸಿ ಉದಾಹರಣ ಮಾಡಿದ್ದೇವೆ.

ಸದರ ಲೆಕ್ಕದ ರೀತಿ. ತಳದ ಕ್ಷೇತ್ರಫಲ ಮಾಡಿ ಇದಕ್ಕೆ ಎರಳತೆಯಿಂದ ಗುಣಿಸಿ ಬಂದ ಗುಣಾಕಾರದ $(\frac{೧}{೩})$ವೇ ಉತ್ತರ.

ಸದರ ಲೆಕ್ಕದ ತಳ (ಪಾಯೊ) ಪತರ್ಗಳಾಕಾರ ಅದೆ. ಅದರ ಕ್ಷೇತ್ರಫಲ ಮಾಡುವರೀತಿ. ಕ,ಜ್ಯಾದ ವರ್ಗ ಮಾಡಿ ಇದಕ್ಕೆ ೩.೧೪ ರಿಂದ ಗುಣಿಸಬೇಕು. ಬಂದ ಗುಣಾಕಾರ ಪತರ್ಗಳದ ಕ್ಷೇತ್ರಫಲವು. ತ್ರಿಜ್ಯಾ ಅಂದರೆ ವ್ಯಾಸದ ಅರ್ಧ ಸದರ ಲೆಕ್ಕದ ಪಾಯದ ತ್ರಿಜ್ಯಾ (ಕ) ಮೊಳ.

$-+ಕ+೩.೧೪ +೩+ \frac{೧}{೩} = ೧೧೩.೧೪$ ೨ ಇಪ್ಪು ಘನಮೊಳ

ಉತ್ತರ.

೧ ಚನಬಸಪ್ಪ ಪರಪ್ಪ ಶೇಡಬಾಳ ವಿದ್ಯಾರ್ಥಿ ಹುಣಶೀಕಟ್ಟಿ
೨ ಗಿರಮಲ್ಲಯ್ಯಾ ಪ್ರಭಯ್ಯಾ ಮಠದ ,,

—oo—

ಗಣಿತವಿಷಯವು.

ಇಂತಿಂತಾ ಸಂಖ್ಯೆಯಿಂದ ಭಾಗಿಸಿದರೆ ಇಷ್ಟಿಷ್ಟೇ ಶೇಷ ಉಳಿಯಬೇಕು, ಇಂತಾದೊಂದು ಸಂಖ್ಯೆ ತೋರಿಸಿ ತೆಗೆಯುವದಕ್ಕೆ ತಕ್ಕ ರೀತಿ:—

(ತಳಗಿನ ಉದಾಹರಣದಿಂದ ತೋರಿಸಲ್ಪಡುವದು.)

ಮೂರು ಸಂಖ್ಯೆಗೆ ೯, ೫, ೪ ರಿಂದ ಭಾಗಿಸಿದರೆ ಅನುಕ್ರಮೇಣ ೬, ೪, ೩ ಶೇಷ ಉಳಿಯುತ್ತದೆ. ಆದರೆ ಆ

ಸಂಖ್ಯೆ ಯಾವದು?

ಭಾಜಕ	ಶೇಷ
೯	೬
೫	೪
೪	೩

ಮೊದಲ ಭಾಜಕವೂ ತತ್ಸಂಮುಂಥವಾದ ಶೇಷವೂ ಸ
ಸಲು:—೯+೬=೧೫ ಈ ಹದಿನೈದನ್ನು, ಎರಡನೇ
ಜಕವಾದ ೫ ರಿಂದ ಭಾಗಿಸಿ ತತ್ಸಂಮುಂಥದ ಶೇಷ
ಉಳಿಯುವದರ ಪರಿಗೆ ಮೊದಲನೆ ಭಾಜಕವಾದ ೯ ಅ
ಮೇಲೆ ಕೂಡಿಸಿಕೊಳ್ಳುತ್ತ ಹೋಗಲು—೧೫+೯=೨೪ ಈ
ಷ್ಟತ್ತು ನಾಲ್ಕು ೫ ರಿಂದ ಭಾಗಿಸಲು ಶೇಷ ನಾಲ್ಕು
ಳಿಯುವದು. ಈ ೨೪ ರಲ್ಲಿ, ಮೂರನೇ ಭಾಜಕವಾದ
ರಿಂದ ಭಾಗಿಸಲು ಶೇಷ ಮೂರು ಉಳಿಯುವ ಪರಿಗೆ
ಲಿನ ಎಲ್ಲಾ ಭಾಜಕಗಳ ಗುಣಾಕಾರವನ್ನು ಕೂಡಿಸಲು
೨೪+(೯×೫=೪೫)+೪೫+೪೫=೧೫೯ ಈ ನೂರಾಐ
ರೊಂಬತ್ತು ಇಚ್ಛಿತಸಂಖ್ಯೆ ಎಂದು ತಿಳಿಯಬೇಕು.
ಟೀಪ—ಬೇಕಾದ ಶೇಷವು ಬಾರದೆ ಬೇರೆ ಶೇಷಗಳು
ಪುನಃ ಬರುತ್ತ ಹೋಗಲು ಇಚ್ಛಿತ ಸಂಖ್ಯೆ ಹೊರಡುವಂ
ಸಂಖ್ಯವೆಂದು ತಿಳಿಯಬೇಕು.

ಶೇಷೋರಾಮಚಂದ್ರ

ಶಾಲಾಪತ್ರಕವು.

——o o*o——

ಪುಸ್ತಕ ೧೩] [ಸಂಚಿಕೆ ೮

ಅಗಷ್ಟ, ೧೮೭೮.

Educational Intelligence.

ವಿದ್ಯಾಸುಧಾರಣೆಗೆ ಸಂಬಂಧವಾದ ವೃತ್ತಾಂತಗಳು

ಬಂಗಾಲ ಇಲಾಖೆಯಾಳದೆ ವಿದ್ಯಾಖಾತೆಯಲ್ಲಿ ಹೊಸ ವ್ಯವಸ್ಥೆಯಾಗುವ ವೃತ್ತಾಂತವನ್ನು ಹಿಂದಿನ ಪತ್ರಿಕೆಯಲ್ಲಿ ತಿಳಿಸಿದ್ದೇವೆ. ಆ ವ್ಯವಸ್ಥೆಯ ಸಾಧಾರಣ ಸ್ವರೂಪವು ಹ್ಯಾಗಂದರೆ, ಈಗಿನಂತೆ ಡಾಯರೇಕ್ಟರರೇ ಈ ಖಾತೆಯ ಮುಖ್ಯಾಧಿಕಾರಿಗಳು. ಆದರೆ ಕಲೆಕ್ಟರರು ಡಿಸ್ಟ್ರಿಕ್ಟ ಕಮಿಟಿ ಯೆಂಬದೊಂದು ಕಮಿಟಿಯ ಸಹಾಯದಿಂದ ಶಾಲೆಗಳ ಮೇಚ್ಚಿದ ವ್ಯವಸ್ಥೆಯನ್ನು ಅಭ್ಯಾಸಕ್ರಮವನ್ನೂ ನೋಡತಕ್ಕವರು. ಇನಸ್ಪೆಕ್ಟರರು ಅಂಶತಃ ಈ ಕಮಿಟಿ ಸಹಿತರಾದ ಕಲೆಕ್ಟರರ ಕೈ ಕೆಳಗೂ ಅಂಶತಃ ಡಾಯರೆಕ್ಟರರ ಕೈ ಕೆಳಗೂ ನಡಿಯ ತಕ್ಕವರು. ಹಾಗೇ ಪ್ರಕಾರ ಡೆಪ್ಯುಟೀ ಇನಸ್ಪೆಕರರು ಅಂಶತಃ ಕಲೆಕ್ಟರರ ಕೈಕೆಳಗೂ ಅಂಶತಃ ಇನಸ್ಪೆಕ್ಟರರ ಕೈಕೆಳಗೂ ನಡಿಯ ತಕ್ಕವರು. ಇತ್ಯಾದಿ.

ಇದೇ ವ್ಯವಸ್ಥೆಯನ್ನು ಮುಂಬಯಿ ಇಲಾಖೆಯಲ್ಲಿ ಸಹ ನಿಲಿಗೊಳಿಸಬೇಕೆಂಬದಾಗಿ ಈ ಇಲಾಖೆಯ ಗವರ್ನರವರು ಆಲೋಚಿಸುತ್ತಾರೆಂದು ಇಂಗ್ಲಿಷ ಪತ್ರಿಕಾನವತ್ರಗಳಿಂದ ತಿಳಿಯುತ್ತದೆ.

——o——

ವೀಲಗಿರಿಯ ಹತ್ತರ ನಂಜನಾಡಿನ ಚಿನ್ನಪ್ಪ ವಿಶೇಷ
ವಾಗಿ ದೊರೆಯುತ್ತಿರುವ ಕಾರಣ ಖಣ್ಣಿಗಳನ್ನು ಅಗಿಯು
ವ ವಿಚಾರವು ನಡಿದಿದೆ. ಕೊಡಗ ಶೀಮೆಯ ಹತ್ತರ ವಾ
ಯನಾಡಿನಲ್ಲಿ ಚಿನ್ನದ ಖಣ್ಣಿಗಳು ಈಗ ಅಗಿಯಲ್ಪಟ್ಟಿವೆ.

—o—

ಅಲಿಜಾ ಬಹಾದೂರ ಜಯಾಜೀರಾವ ಸಿಂದೆ ಇವರು
ಕಾಶಿಯಲ್ಲಿ ಕೋಟಿಲಿಂಗಗಳನ್ನು ಸ್ಥಾಪಿಸುವ ಉದ್ಯೋಗ
ವನ್ನು ನಡಿಸಿದ್ದಾರೆಂದು ಕೇಳುತ್ತೇವೆ.

—o—

ಇಂಗ್ಲಿಷ ಸರಕಾರದವರು ಈ ದೇಶದಲ್ಲಿ ದಾಕ್ಷಿಣ್ಯವಿಡಿ
ರಾಜ್ಯಭಾರವವನ್ನು ನಡಿಸಿ ಪೂರ್ಣವಾದ ಶಾಂತತೆಯನ್ನುಂಟು
ಮಾಡಿದ ಪ್ರಯುಕ್ತ ಪ್ರಜಾಪುಷ್ಟಿಯು ಮಿತಿ ಮೀರಿ ಬೆಳಿದ
ದೇಶದಲ್ಲಿ ಬಡತವವು ಹೆಚ್ಚಾಗುತ್ತ ನಡಿದದೆಂದು ಪ್ರೊಬ್ಬ
ಇಂಗ್ಲಿಷ ಪತ್ರಿಕರ್ತನು ಪ್ರತಿಪಾದಿಸುತ್ತಾನೆ.

—o—

ಕವ್ವಾ ಪುತ್ರರನ್ನು ಹೇಳುವ ರೀತಿ— ನೀವು, ನಿಮ್ಮ ಹೆಂ
ಡತಿ, ಕೂಡಿ ಇಬ್ಬರಾದಿರಿ. ಈ ೨ ರೊಳಗೆ ಬದುಕಿದ್ದ
ಗಂಡು ಮಕ್ಕಳ ಸಂಖ್ಯವನ್ನು ಕೂಡಿಸಿ ಇಪ್ಪತ್ತಿವುಾಡಿ, ಆ
ದರೊಳಗೆ ೧ ಕೂಡಿಸಿ ೫ ರಿಂದ ಗುಣಿಸಿ ಬದುಕಿದ್ದ ಹೆಣ್ಣು
ಮಕ್ಕಳ ಸಂಖ್ಯವವನ್ನು ಕೂಡಿಸಿರಿ. ಬಳಿಕ ಆ ಸಂಖ್ಯಕ್ಕೆ ೧೦ ರಿ
ದ ಗುಣಿಸಿ, ತೀರಿಕೊಂಡ ಯಾವತ್ತು ಮಕ್ಕಳ ಸಂಖ್ಯ
ನ್ನು ಕೂಡಿಸಿರಿ. ತರುವಾಯ ೩೫೦ ಕಳೆಯಲಾಗಿ, ಉಳಿ
ಸಂಖ್ಯದ ಮೊದಲನೇ ಅಂಕೆಯು ಬದುಕಿದ್ದ ಗಂಡು ಮಕ್ಕ
ನ್ನು, ಆನೇ ಅಂಕೆಯು ಬದುಕಿದ್ದ ಹೆಂಣು ಮಕ್ಕಳನ್ನೂ

ನೂರನೇ ಅಂಕೆಯು ತೀರಿಕೊಂಡ ಮುಕ್ಕಳನ್ನೂ ತೋರಿ ಸುವದು.

—o—

ಒಳಗಡೆಯಲ್ಲಿ ಚಂದ್ರನ ಮೇಲೆ ಬೊಂದು ಚಮತ್ಕಾರದ ಹೊಸ ರಂಗತೆಯು ವರ್ತಿಸಿರುತ್ತದೆಂದು ಯುರೋಪದ ಜ್ಯೋತಿಷಿಗ ಳು ಹೇಳುತ್ತಾರೆ. ಚಂದ್ರನ ಮೇಲೆ ಕಾಣಿಸುವ ಕಪ್ಪು ಕ ಲೆಯು ಬೊಂದು ಬಹು ಯೆತ್ತರವಾದ ಪರ್ವತ ವುಂಟೆಂದು ದು ರ್ಬೀನ್ನಿಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಆ ಪರ್ವತದ ತ ಲೆಯ ಮೇಲೆ ಇತ್ತ್ಯಕಡೆಯಲ್ಲಿ ಸುಮಾರು ೩ ಮೈಲು ವ್ಯಾಸ ವುಳ್ಳದೊಂದು ಜ್ವಾಲಾಮುಖಿಯ ಮುಖವು ಉಂಟಾಗಿ, ಆ ಮುಖದೊಳಗಿಂದ ನಿರಂತರವಾಗಿ ಜ್ವಾಲೆಗಳು ಹೊರಡುತ್ತಿರು ತ್ತವೆ!

—o—

ಬ್ರಹ್ಮದೇಶದ ಅರಸನಿಗೆ ಮೊಬ್ಬ ಜ್ಯೋತಿಷಿಯು, ಕೆಲ ವೊಂದು ಪಕ್ಷ (೧೫ ದಿವಸ) ದೊಳಗೆ ನಿನ್ನ ರಾಜಧಾನಿ ಯೊಳಗೆ ಬಿರುಗಾಳಿಬಿಟ್ಟು ಪಟ್ಟಣವೆಲ್ಲಾ ಸುಡುವದೆಂತಲೂ, ನ್ನ ಪ್ರಜೆಗಳು ಡಾಳಿಯನ್ನು ಯೆಬ್ಬಿಸುವರೆಂತಲೂ ಹೇಳಿದ ಕಾರಣ ಆ ರಾಜಧಾನಿಯೊಳಗಿನ ಜನರೆಲ್ಲ ಗುಳಿ ಕಟ್ಟಿಕೊಂಡು ಂದಿ ಹೋಗುವ ಹವಣಿಯಲ್ಲಿ ಇರುತ್ತಾರೆ. ಅರಸನಂತು ರ್ಮಕೃತ್ಯಗಳಲ್ಲಿ ಕಾಲಕ್ಷೇಪ ಮಾಡುತ್ತ ಕೂತಿದ್ದಾನೆ.

—o—

ಬೆವರಸಾಲಿಗೆ ಒಂಷಧ—ಸುಮಾರು ಬೊಂದು ಮಾಶಿಯಷ್ಟು ತುಪ್ಪಕನ್ನು ಸಣ್ಣಾಗಿ ಪುಡಿಮಾಡಿ ಅದನ್ನು ೨ ರೂಪಾ ಯಿ ತೂಕದಷ್ಟು ನೀರೊಳಗೆ ಚನ್ನಾಗಿ ಜೆರಿಸಿ ಆ ನೀರನ್ನು

ಬೆವರಸಾಲಿಗೆ (ವಿಶೇಷವಾಗಿ ಸ್ನಾನ ಮಾಡಿದನಂತರ) ಹಚ್ಚಿ
ಲಾಗಿ ತತ್ಕಾಲವೇ ಗುಣ ಕಾಣುವದು.

—o—

ಚೇಳು ಕಡಿದವ್ದಕ್ಕೆ ಉಪಾಯಗಳು — ೧ ಕಡಿದ ಸ್ಥಳಕ್ಕೆ
ಜೇನತುಪ್ಪ ಹಚ್ಚು. ೨ ನಾಲ್ಕು ಗುಂಜಿ ಶೀಗೇಕಾಯಿಯ ಸ
ಡಿಯನ್ನು ವಿಳ್ಳೇದೆಲೆಯೊಳಗೆ ತಿನಿಸ. ೩ ಪಾಪಡಖ
ರ ತೇದು ಕಡಿದಲ್ಲಿ ಹಚ್ಚು. ೪ ಪಡುಪಲದ ಯೆ
ಯನ್ನು ತಲೆಗೆ ತಿಕ್ಕು. ೫ ಬೆಳ್ಳುಳ್ಳಿಯ ಕಷಾಯವನ
ಮೈಗೆ ಹಚ್ಚು, ೬ ಆಲದ ಅಂಟು ಕಡಿದಲ್ಲಿ ಹಚ್ಚು
ಚಾಲಿಯುಪ್ಪೊಳದೋಟೆಯನ್ನು ವಿಳ್ಳೇದೆಲೆಯೊಳಗೆ ತಿನಿಸು.
ಮೊಲೇಹಾಲು ಯೆರಡೂ ಹೊರಳೆಗಳೊಳಗೆ ಹಾಕು.
ಖಜೂರಿ, ಅರಿಶಿನಬೇರು, ಇವೆರಡೂ ಕುಟ್ಟಿ ಜಿಲಿಪೆಯ
ಹಾಕಿ ತಂಬಾಕದಂತೆ ತೇದು.

—o—

ಮೆ. ರಸೆಲ್ ಧೊರೆಗಳು ತಮ್ಮ ರಜೆಯನ್ನು ಬೆಳಿಸ
ಕ್ಕವರಿದ್ದಾರೆಂದು ಸುದ್ದಿಯುಂಟು. ಹಾಗಾದರೆ ಅವರು
ರುವ ವರೆಗೆ ರಾ. ಸಾ. ಪಟವರ್ಧನ ಇವರು ನಿಲ್ಲುವರೆಂ
ತೋರುತ್ತದೆ.

—

ನಾಳಿನ ೧೬ ನೇ ತಾರೀಖಿನಲ್ಲಿ ಮುಲಖೀ ಪರೀಕ್ಷೆ
ಪುರುವಾಗತಕ್ಕದುಂಟು. ಆದರಲ್ಲಿ ಧಾರವಾಡ ಜಿಲ್ಲೆಯ
ಹೊರ್ತು ಬೇರೆ ಜನರು ತಕ್ಕೊಳ್ಳಲ್ಬಡಲಿಕ್ಕಿಲ್ಲವೆಂದು
ವೀರನಾಮೆಯನ್ನು ಹಚ್ಚಿರುತ್ತಾರೆ.

—o—

ರಾ. ರಾ. ಶ್ರೀನಿವಾಸ ರಾಮಚಂದ್ರ ಸೌದಿ ಮೈಸೂರು ಪ್ರಾಂತ ಸಾಲಿ ಟ್ರೀ. ಕಾ. ಇವರನ್ನು ಮುಂಬಯಿ ಕಾಯಕೋರ್ಟಿನಲ್ಲಿ ಅಸಿಸ್ಟಾಂಟು ಕನ್ನಡ ಟ್ರಾನ್ಸ್‌ಲೇಟರರ ಸ್ಥಳಕ್ಕಾಗಿ ಮು. ಆನಸ್ಟೈಕ್ಷರಪರು ಶಿಫಾರಸು ಮಾಡಿದ್ದಾರೆಂದು ಕೇಳುತ್ತೇವೆ.

ಒಬ್ಬ ಕುಶಲನು ಕಿವುಡರಿಗೆ ಕೇಳಬರುವಂತೆ ಮಾಡುವ ಅತಿ ಸುಲಭ ಯುಕ್ತಿಯನ್ನು ತಿಳಿಸುವದು ಹ್ಯಾಗಂದರೆ. ಅರವಾಸಿಸಪ್ಪು ದೊಡ್ಡಪಾದ ತಗಡಿನ ಯೆರಡು ಡಬ್ಬಿಗಳನ್ನು ತಕ್ಕೊಂಡು ಅವುಗಳ ಬುಡಗಳನ್ನು ಕತ್ತಿ ಕೆಗ. ತರುಪಾಯ ಆ ಬುಡಗಳ ಸ್ಥಳದಲ್ಲಿ ಮೃದುಪಾದ ಚರ್ಮವನ್ನು ಬಿಗಿದು ಕಟ್ಟಿ ಆ ಚರ್ಮಗಳ ಮಧ್ಯಗಳಲ್ಲಿ ಪೊಂದು ಸಣ್ಣ ತೂತು ಮಾಡಿ, ಪೊಂದು ಉದ್ದಾದ ತಂತಿಯನ್ನು ತಕ್ಕೊಂಡು, ಅ ಪರ ಯೆರಡೂ ತುದಿಗಳನ್ನು ಅವೆರಡು ತೂತುಗಳಲ್ಲಿ ಶೇರಿಸಿ, ಪೊಳ ಮೈಯಲ್ಲಿ ಪೊಂದು ಕಡ್ಡಿಯನ್ನು ಅಡ್ಡ ಕಟ್ಟಿ ಬಿಡು, ಅಂದರೆ ಅದು ಪೊಂದು ಸುಲಭವಾದ ಟೆಲೀಫೋನ ಯಂತ್ರವಾಗುವದು. ಬಳಿಕ ಕಿವುಡನ ಯೆರಡೂ ಕೈಗಳನ್ನು ಅವನ ಕಿವಿಗಳ ಮೇಲೆ ಗಟ್ಟಿಯಾಗಿ ಇಡಿಸಿ. ಆ ಕೈಗಳ ಮೇಲಿಂದ ಯಂತ್ರದ ತಂತಿಯನ್ನು ಪೊಂದು ಸುತ್ತು ಸುತ್ತಿ, ಯೆರಡೂ ಡಬ್ಬಿಗಳನ್ನು ತಂತಿ ಇದ್ದಷ್ಟು ದೂರ ತಕ್ಕೊಂಡು ಹೋಗು. ತರುಪಾಯ ಅವೆರಡರಲ್ಲಿ ಯಾವದಾದರೂ ಪೊಂದು ಡಬ್ಬಿಯೊಳಗೆ ಮೋರೆ ಹಾಕಿ ಯೆಷ್ಟು ಮೆಲ್ಲಗೆ ಮಾತಾಡಿದರೂ, ಆ ಶಬ್ದಗಳು ಕಿವುಡನಿಗೆ ಕೇಳಬರುವವು.

ಮೈಸೂರಿನ ಜೀಷ್ಟಕಮಿಶನರರಾದ ಮಿ. ಗಾರ್ಡನ್ ಧೊರೆ

ಗಳು ಬೆಂಗಳೂರಲ್ಲಿ ಪೊಕ್ಕಳತನದ ವಿಷಯವನ್ನು ಕಲಿಸುವ ಶಾಲೆಯನ್ನು ಸ್ಥಾಪಿಸುವ ಉದ್ಯೋಗ ನಡೆಯಂತೆ ಕೇಳುತ್ತೇವೆ.

—o—

ರಮಾಬಾಯಿ ಯೆಂಬವಳೊಬ್ಬ ಮಹಾರಾಷ್ಟ್ರ ಬ್ರಾಹ್ಮಣ ಜಾತಿಯ ತರುಣಿಯು ಈಗ ಕಲಕತ್ತೆಯಲ್ಲಿ ಇರುತ್ತಾರೆ. ಆಕೆ ಸಂಸ್ಕೃತ ವಿದ್ಯದಲ್ಲಿ ಪಾರಂಗತಳಾಗಿ, ಆ ಭಾಷೆಯಲ್ಲಿ ಹೊಸ ಶ್ಲೋಕಗಳನ್ನು ರಚಿಸುವದರಲ್ಲಿ ಅತ್ಯಂತೀಯಳೆನಿಸಿ ಕೊಳ್ಳುತ್ತಾಳೆ. ಆಕೆಯನ್ನು ಕಲಕತ್ತೆಯೊಳಗಿನ ಪಂಡಿತರೂ ಯುರೋಪೀಯನ್ ವಿದ್ವಾಂಸರೂ ತಮ್ಮ ಮನೆಗೆ ಕರಿದು, ಸಭೆಗಳನ್ನು ಮಾಡಿ, ಆಕೆಯ ಬುದ್ಧಿ ಚಾತುರ್ಯಕ್ಕೆ ಬೆರಗಾಗಿ, ಬಹು ಮಾನದೊಡನೆ ಆಕೆಗೆ ದೊಡ್ಡ ದೊಡ್ಡ ಸಂಭಾವನೆಗಳನ್ನು ಕೊಡುತ್ತಾರೆಂಬ ಸಂತೋಷದ ವೃತ್ತಾಂತವು ಅತ್ತಕಡೆಯ ಪತ್ರಗಳಿಂದ ತಿಳಿಯುತ್ತದೆ.

—o—

ಮುಂಬಯಿಯಲ್ಲಿ ಕೆಲವರು ಪಾರ್ಸೀ ಜಾತಿಯ ಹುಡುಗರು ಕೂಡಿ ತಮ್ಮೊಳಗೊಂದು ಗುಪ್ತವಾದ ಸಂಘವನ್ನು ಮಾಡಿಕೊಂಡು ದೀರ್ಘ ಪ್ರಯತ್ನ ನಡಿಸಿದ್ದಾರೆ. ಅದೇನೆಂದರೆ, ಅಮೇರಿಕ ಖಂಡಕ್ಕೆ ಹೋಗಿ, ಅಲ್ಲಿ ಹೊಸದೊಂದು ದೇಶವನ್ನು ಸಂಪಾದಿಸಿಕೊಂಡು ಸ್ವತಂತ್ರರಾಗುವ ಉದ್ಯೋಗವು!

Structure of the Dravidian Languages

ದ್ರವಿಡ ಭಾಷೆಗಳ

ವ್ಯುತ್ಪತ್ತಿಯು.

ಈ ವಿಷಯವನ್ನು ಕುರಿತು ಸ್ವಲ್ಪ ವಿಚಾರ ಮಾಡುವ. ಈ

ಗದ ವರ್ಣಗಳ ಟ, ಡ, ಣ, ಈ ಮೂರು ವರ್ಣಗಳು
ಮೂಪತ್ತು ದ್ರವಿಡ ಭಾಷೆಗಳಲ್ಲಿ ಕೇವಲ ಬೀಚಾಕ್ಷರಗಳಂ
ಿ ಇರುತ್ತವೆ. ಅಂದರೆ ಇವುಗಳನ್ನು ತೆಗೆದು ಹಾಕಿದರೆ
ಯಾವದೂ ದ್ರವಿಡ ಭಾಷೆಯು ಕ್ಷಣಹೊತ್ತು ನಾಗಲಾರದು
ಸಂಸ್ಕೃತ ಭಾಷೆಯಲ್ಲಿಯೂ, ಅದರಿಂದ ಹುಟ್ಟಿದಂಥ ಯಾ
ತ್ತು ಉತ್ತರ ದೇಶೀಯ ಭಾಷೆಗಳಲ್ಲಿಯೂ ಟವರ್ಗದ ಐ
ೂ ವರ್ಣಗಳು ಇದೇ ಮೇರಿಗೆ ಅವಶ್ಯಕವಾಗಿ ಇದ್ದಂತೆ
ಾಣುತ್ತವೆ. ಆದರೂ ಟ, ಡ, ಣ, ಈ ಮೂರು ವರ್ಣಗ
ನ್ನು ಸಂಸ್ಕೃತ ಭಾಷೆಯು ದ್ರವಿಡ ಭಾಷೆಗಳಿಂದ ಕೈಗಡ
ಕ್ಕೊಂಡಿತೆಂದು ಬುದ್ಧಿವಂತರು ತರ್ಕಿಸುತ್ತಾರೆ. ಈ ತರ್ಕ
ಸಯುಕ್ತಿಕವಾದದ್ದೆಂದು ನಮಗೂ ತೋರುತ್ತವೆ. ಯಾ
ಂದರೆ ಈಗ ನಡಿಯುವ ಸಂಸ್ಕೃತ ಭಾಷೆಯಲ್ಲಿ ಈ ವ
ರ್ಣಗಳಿಲ್ಲ ಇರುತ್ತಿದ್ದಾಗ್ಯೂ, ವೇದದೊಳಗಿನ ಅತಿ ಪುರಾತ
ಸೂಕ್ತಗಳಲ್ಲಿ ಈ ವರ್ಣಗಳು ಕಾಣಿಸುವದಿಲ್ಲ. ಕ್ವಚಿ
ತ್ತಿಗೆ ಈ ವರ್ಣಗಳು ಸಂಧಿ ಸಂಧಿ ಸ್ಥಳಗಳಲ್ಲಿ ಮಾತ್ರ
ಷ್ಟಿಗೆ ಬೀಳುತ್ತವೆ. ಈ ಮಾತಿನ ಪ್ರತ್ಯಂತರವನ್ನು ಸುಜ್ಞ
ಉದುತ್ಯ, ಸೌರ, ಪುರುಷಸೂಕ್ತ, ವಿಷ್ಣುಸೂಕ್ತ, ಇ
ತ್ಯಾದಿ ಸೂಕ್ತಗಳಲ್ಲಿ ನೋಡಿಕೊಳ್ಳ ಬಹುದು. ಈಡ್ಯ, ವಿ
ಷ್ಣು, ಪ್ರತಿಷ್ಠಾ, ಈಷ್ಟೇ, ಇತ್ಯಾದಿ ವೇದೋಕ್ತ ಶಬ್ದಗಳ
ಟವರ್ಣಗಳು ಸಂಧಿ ಕಾರ್ಯದಿಂದ ಮಾತ್ರ ಬಂದಿರುತ್ತ
ಅದರಿಂದ ಅರ್ವಾಚೀನರು ಈ ವರ್ಣಗಳನ್ನು ಅರ್ವಾ
ನ ವ್ಯಾಕರಣಕ್ಕೆ ಸರಿಯಾಗಿ ಸಂಧಿಸ್ಥಳಗಳಲ್ಲಿ ಸೇರಿಸಿ
ರಿಂದ ಅನುಮಾನಕ್ಕೆ ಮಾರ್ಗವಾಗುತ್ತವೆ. ಇವಲ್ಲದೆ ಪಾರ್ಸಿ
ರ ಧರ್ಮ ಪುಸ್ತಕಗಳ ಭಾಷೆಯಾದ ಝೆಂದ(ಛಂದ) ಯೆಂ

ಬ ಭಾಷೆಯು ಪೀಠ ವೇದ ಭಾಷೆಯ ಹಾಗೇ ಇರುತ್ತದೆ
ಅದಕ್ಕೂ ಇದಕ್ಕೂ ಬಹುತರ ಯೇಸು ಹೆಚ್ಚು ಕಡಿಮೆ ಇಲ್ಲೆ
ದು ಹೇಳಬಹುದು. ಆದರೆ ಆ ಭಾಷೆಯಲ್ಲಿ ಟವರ್ಗದ ವರ್ಣ
ಗಳು ನಾಮಮಾತ್ರವಿನಪ್ರಯೋಗ. ಇದೇ ಪ್ರಕಾರಕ್ಕೆ ಸಂಸ್ಕೃತ ಪ
ರ್ಗದ ಭಾಷೆಗಳಾದ ಲ್ಯಾಟಿನ್, ಹಾಯ್‌ಜರ್ಮನ್, ಮುಂ
ದ ಯುರೋಪಖಂಡದ ಪ್ರಾಚೀನ ಭಾಷೆಗಳಲ್ಲಿ ಸಹ ಆ
ವರ್ಣಗಳು ಯೆಪ್ಪು ಮಾತ್ರವೂ ಇರುವದಿಲ್ಲ. ಇದರಿಂದ ಟ
ವರ್ಗೀಯ ವರ್ಣಗಳನ್ನು ಸಂಸ್ಕೃತ ಭಾಷೆಯು ದ್ರವಿಡ ಭಾ
ಗಳಿಂದ ಕದ್ದು ಕೊಂಡಿತೆಂಬ ಅನುಮಾನವು ನಿರ್ಮೂಲವಾದ ಪ
ಗುತ್ತದೆ. ಇನ್ನು ಠ, ಢ, ಇವೆರಡು ವರ್ಣಗಳು ದ್ರವಿ
ಭಾಷೆಗಳಲ್ಲಿ ಇಲ್ಲವೆ ಸಂಸ್ಕೃತದಲ್ಲಿ ಯೆಲ್ಲಿಂದ ಬಂದವೆ
ದು ಕೆಲವರು ಆಕ್ಷೇಪಿಸುವರು. ಅದಕ್ಕೆ ನಮ್ಮ ಉತ್ತರವೇನ
ದರೆ, ಕ, ಚ, ತ, ಪ, ಈ ನಾಲ್ಕು ವರ್ಗಗಳ ಮಹಾಪ್ರಯೋಗದಿಂ
ಖ, ಛ, ಥ, ಫ, ಯೆಂಬ ಮಹಾ ಪ್ರಾಣ ವರ್ಣಗಳುಂಟಾದವು. ಆ
ದರೆ ಆ ನಾಲ್ಕು ವರ್ಗಗಳಲ್ಲಿ ಮಹಾ ಪ್ರಾಣವರ್ಣಗಳಿದ್ದ
ತೆ ಸಂಸ್ಕೃತಾಭಿಮಾನಿಗಳು ಟವರ್ಗದಲ್ಲಿಯು ಯೆರಡು ಹೊ
ಸ ಮಹಾಪ್ರಾಣ ವರ್ಣಗಳನ್ನು ಹುಟ್ಟಿಸಿದರು.

ಇನ್ನು ವೇದದಿಂದ ಹುಟ್ಟಿದಂಥ ಉತ್ತರ ದೇಶೀಯ ಭ
ಷೆಗಳಲ್ಲಿ ಟವರ್ಗೀಯ ವರ್ಣಗಳು ಅಪ್ರತಿಹತವಾಗಿ ಸೇ
ರ್ದ ಉಪಪತ್ತಿಯು ಹ್ಯಾಗೆಂದರೆ—ಯಾವಸೊಂದು ಭಾಷೆ
ಸಮಾಪ್ತಿಯ ಕಾಲಕ್ಕೆ ಆ ಭಾಷೆಯಿಂದ ಹೊಸ ಭಾಷೆಯ
ಹುಟ್ಟುತ್ತದೆ. ಅಂದರೆ ನಡಿಯುವ ಭಾಷೆಯೊಳಗಿನ ಶಬ್ದ
ಉಚ್ಚಾರಗಳು ಗ್ರಾಮ್ಯ ಜನರ ಮುಖದಲ್ಲಿ ಕೆಡುತ್ತಾ ಕೆ
ತ್ತಾ, ಕಡೆಯಲ್ಲಿ ಮೂಲಭಾಷೆಯ ಸ್ವರೂಪವು ನಷ್ಟವಾ

ವ್ಯಾಕರಣದ ಹೊಸ ನಿಯಮಗಳು ವ್ಯಂಟಾಗುತ್ತವೆ. ಉದಾಹರಣಾರ್ಥವಾಗಿ ಸಂಸ್ಕೃತದಿಂದ ಹುಟ್ಟಿದ ಬಾಲಬಾಷೆಯನ್ನೂ ಹಳೆಗನ್ನಡದಿಂದ ಹುಟ್ಟಿದ ಹೊಸಗನ್ನಡ ಭಾಷೆಯನ್ನೂ ನೋಡಿಕೊಳ್ಳಬಹುದು. ಆದದರಿಂದ ಸಂಸ್ಕೃತವು ಬಹುಕಾಲ ನಡೆದ ಬಳಿಕ ಅದನ್ನು ಮುರಿದು ಅದರ ಸ್ಥಳದಲ್ಲಿ ನೆಲೆಗೊಂಡ ಪ್ರಾಕೃತ, ಬಾಲಭಾಷೆಯೆಂಬ ಪಾಶ್ಚಿಮಿಕ ಭಾಷೆಗಳು ಕೆಲಕಾಲ ನಡೆದ ನಂತರ ಈಗ ನಡೆಯುವ ಉತ್ತರ ದೇಶೀಯ ಭಾಷೆಗಳು ಹುಟ್ಟಿದವೆಂಬದಕ್ಕೆ ಸಂದೇಹವಿಲ್ಲ. ಆದರೆ ವೇದದ ವ್ಯವಸ್ಥಾಪಕರು (ವೇದವ್ಯಾಸ ಋಷಿಯ) ಸಂಧಿಸ್ಥಳಗಳಲ್ಲಿ ವೇದದೊಳಗೆ ಸಹ ಉಪರಿಗೀಯ ವರ್ಣಗಳನ್ನು ಸೇರಿಸಿದರೆಂದು ನಾವು ಮೇಲೆ ಹೇಳೇ ಇರುತ್ತೇವೆ. ಅಂದ ಬಳಿಕ ಈ ವರ್ಣಗಳು ಸಂಸ್ಕೃತದಲ್ಲಿ ಸೇರಿದ ಬಳಿಕ ಬಹು ಕಾಲವು ಕ್ರಮಿಸಿ, ಆಧುನಿಕ ಸಂಸ್ಕೃತ ಭಾಷೆಯಲ್ಲಿಯೇ ಮೊದಲು ಈ ವರ್ಣಗಳು ಕೇವಲ ಸ್ವಾಭಾವಿಕವಾಗಿ ಹೋದನಂತರ ಈಗಿನ ಉತ್ತರ ದೇಶೀಯ ಭಾಷೆಗಳು ಹುಟ್ಟಿದವು. ಆದದರಿಂದ ಇವುಗಳಲ್ಲಿ ಈ ವರ್ಣಗಳು ಅಂಗಭೂತವಾಗಿ ಇರುವದು ಸ್ವಾಭಾವಿಕವೇ.

ತಮಿಳ ವರ್ಣಮಾಲೆಯು—ಈ ವರ್ಣಮಾಲೆಯ ಕ್ರಮದಲ್ಲಿ ಸಂಸ್ಕೃತದ ಸಂಬಂಧವು ಬಹು ಕಡಿಮೆ ಯೆಂದು ಹೇಳಬಹುದು. ಸ್ವರಗಳ ಕ್ರಮವೂ ಉಚ್ಚಾರವೂ ಯಾವತ್ತೂ ಕನ್ನಡ ಸ್ವರಗಳಂತೆ ವುಂಟು. ಆದರೆ ಅನುಸ್ವಾರ ವಿಸರ್ಗಗಳೂ ಋ ೠ ಕಾರಗಳೂ ಇರುವದಿಲ್ಲ. ವರ್ಗೀಯ ವ್ಯಂಜನಗಳಲ್ಲಿ ಪ್ರಥಮ ಪಂಚಮ ವರ್ಣಗಳು ಮಾತ್ರ ವುಂಟು ಅಂದರೆ ಚ ವರ್ಗದಲ್ಲಿ ಚ, ಞ, ಇವೆರಡೇ ಅಕ್ಷರ

ಗಳು, ಚ ವರ್ಗದಲ್ಲಿ ಟ, ಣ, ಇವೆರಡೇ, ಇತ್ಯಾದಿ. ಆದರೆ
ಕ, ಚ, ಟ, ತ, ಪ, ಯುಂಟ ಸ್ಪಾಥಪೂರ್ವಕ್ಷರಗಳು ಕೆಲವು
ನ್ಯಳಗಳಲ್ಲಿ ಗ, ಜ, ಡ, ದ, ಬ, ಯೆಂಬ ತೃತೀಯಾಕ್ಷ
ರಗಳಂತೆ ಉಚ್ಚರಿಸಲ್ಪಡುತ್ತವೆ. ಈ ಉಚ್ಚಾರ ಭೇದದ ನಿ
ಯಮವನ್ನು ಮುಂದೆ ಕೊಡುವೆವು. ಅವರ್ಗೀಯ ಅರ್ಧ
ಸ್ವರಗಳಲ್ಲಿ ಯ, ರ, ಲ, ವ, ಈ ನಾಲ್ಕು ವರ್ಣಗಳು
ಕನ್ನಡದಂತೆ ಇರುವದಲ್ಲದೆ, ಬೇರೆ ನಾಲ್ಕು ಅರ್ಧಸ್ವರಗಳು
ತಮಿಳದಲ್ಲಿ ಇರುತ್ತವೆ. ಅವುಗಳ ವಿವರ.—

"ಱ್ರ" ಇದರಂಥ ಉಚ್ಚಾರವುಳ್ಳದ್ದೊಂದು ವರ್ಣವುಂಟು
ಆದರೆ ಅದರ ಉಚ್ಚಾರವು ಱ್ರಕ್ಕಿಂತ ಬಹು ಹಗುರ
ದದ್ದು.

"ೞ" ಕಾರವಂತು ಪ್ರಸಿದ್ಧವೆ. ಆದರೆ ಇದರ ಉಚ್ಚಾ
ರದಲ್ಲಿ ಕೆಲವು ಭೇದಗಳುಂಟು. ಅವುಗಳನ್ನು ಮುಂ
ವಿವರಿಸುವ.

"ಟ್ರ್" ಇದರಂಥ ಕರ್ಕಶವಾದ ಉಚ್ಚಾರವುಳ್ಳದ್ದೊಂದು
ರ್ಣವುಂಟು. ಆದರೆ ಅದರಲ್ಲಿ ಟ್ ಕಾರದ ಶ್ರವಣವು ಬ
ವುಂಡವು, ರ್ ಕಾರದ ಶ್ರವಣವು ಬಹುತರ "ರ್ರ್"
ರದ ಹಾಗೆ ಆಗುತ್ತದೆ.

"ನ್" ಕಾರವು ಮತ್ತೊಂದುಂಟು. ಆದರೆ ಇದಕ್ಕೂ
ವರ್ಗದೊಳಗಿನ ನ್ ಕಾರಕ್ಕೂ ಉಚ್ಚಾರದಲ್ಲಿ ಯೇನು ಭೆ
ವಿಲ್ಲ; ಉಪಯೋಗದಲ್ಲಿ ಮಾತ್ರ ಭೇದವುಂಟು.

ಶ, ಷ, ಸ, ಹ, ಕ್ಷ, ಈ ಐದು ಆಂತ್ಯ ವರ್ಣಗಳು
ಕೇವಲ ಸಂಸ್ಕೃತ ಶಬ್ದಗಳ ಉಚ್ಚಾರಕ್ಕೋಸ್ಕರವಾಗಿ
ಸಂ ಪ್ರಾಚೀನ ಲಿಪಿಯಿಂದ ತಕ್ಕೊಂಡಿರುತ್ತಾರೆ. ಆದರೆ

ಕಾರಕ್ಕೆ ಬದಲಾಗಿ 'ಜ' ಕಾರದಂಥ ಉಚ್ಚಾರವುಳ್ಳದ್ದೊಂದು ವರ್ಣವುಂಟು. ಕ್ಷ ಕಾರವು ಕನ್ನಡದಲ್ಲಿ ಆದಂತೆ ತಮಿಳದ ಲ್ಲಿ ಸಹ ಕ್,ಷ್, ಇವೆರಡು ವರ್ಣಗಳು ಕೂಡಿ ಆಗಿರುತ್ತ ವೆ. ಆದದರಿಂದ ಇದನ್ನು ವರ್ಣ ಮಾಲೆಯೊಳಗಿಂದ ತೆಗಿದು ಹಾಕ ಬಹುದು.

ಸಂಯೋಗದಿಂದ ಈ ವರ್ಣಗಳ ರೂಪಗಳಲ್ಲಿ ಯಿಷ್ಟು ಸಾತ್ರವೂ ಹೆಚ್ಚು ಕಡಿಮೆ ಯಾಗುವುದಿಲ್ಲ. ಸ್ವರಸಂಯೋ ಗದಿಂದ ಬಳ್ಳಿಗಳನ್ನು ಮಾಡುವಾಗ ಸ್ವರ ಚಿಹ್ನಗಳನ್ನು ವ್ಯಂ ಜನಗಳ ಹಿಂದಾಗಲಿ ಮುಂದಾಗಲಿ ಇಡುವರು. ವ್ಯಂಜನ ಸಂ ಯೋಗಗಳಲ್ಲಿ ಮೊದಲಿನ ವರ್ಣವನ್ನು ಸ್ವರಚಿಹ್ನದ ಹೊರ್ವಾ ಯಿರಡನೇದಕ್ಕೆ ಹೊಂದಿಸಿ ಬರಿಯುವರು, ಉದಾ. ತ್ರ ಬರಿ ಯು ಬೇಕಾದರೆ 'ತ್ಯ' ಬರಿದಂತೆ.

—೦೦—

Means to improve a School.

ಉತ್ತಮ ಶಾಲಾ ಆಗುವದಕ್ಕೆ ಕುನು ಮೂಡಬೇಕು.

ನಾನು ಕೆಳಗೆ ವ್ಯಕ್ತ ಪಡಿಸಿದ ವಿಚಾರಗಳನ್ನು ಓದಿದ ವ್ಯರೂ, ಅನಿಪ್ಪಾದವರೂ, ಇವರಲ್ಲಿ ಗ್ರಾಹ್ಯವಾದ ನಂ ಶವನು ಸ್ವೀಕರಿಸಿದರೆ ನನ್ನ ಶ್ರಮ ಸಫಲವಾಯು ವು ತಿಳಿಯುವೆನು.

೧ ಶಾಲಾಖಾತೆಯ ಮುಖ್ಯೋದ್ದೇಶವು.

ಎಲ್ಲ ಪ್ರಾಣಿಗಳಿಗಿಲ್ಲದ ಜ್ಞಾನವೆಂಬ ಹೆಚ್ಚಿನ ವಸ್ತು ವು ದೇವರು ಮನುಷ್ಯನಿಗೆ ಕೊಟ್ಟಿದ್ದಾನೆ. ಅದು ವಿವಿಧವು ಬೆಳೆಯುವ ಹಾಗಿದೆ.ಹಿಳ್ಳೆ ಅಭ್ಯಾಸಮಾಡುವವನು ಬ್ಬ

ಳಿ, ಎಂಮು. ಳಿ, ಪರೀಕ್ಷೆಗಳಂಮು ಕೊಟ್ಟಿ ಬುಧ್ಧಿವಂತ ನ
ಎಸುತ್ತಾನೇ, ಏನು ಅಭ್ಯಾಸಮಾಡದೆ ವೃಥ್ಥಾವಾಗಿ ಕಾಲಕ್ಷ
ಮಣ ಮಾಡುವವನು ನೀಚಪ್ರಾಣಿಗಳಕಿಂತ ಹೆಚ್ಚಿನ ಬುಧ್ಧಿ
ಯುಳ್ಳವನಾಗುವುದಿಲ್ಲ. ಗಿಳಿಗಳಿಗೆ ಕಲಿಸುವ ವಿದ್ಯವೂ ಮ
ನುಷ್ಯನ ವಿದ್ಯವು ಬೇರೆ ಬೇರೆ. ಅರ್ಥ ತಿಳಿಯದೆ ಅಭ್ಯಾಸಮಾ
ಡುವುದು ಗಿಳಿ ಓದು. ಅಭ್ಯಾಸಮಾಡುವದಂನು ಗ್ರಹಿಸ
ತ್ತಾ ನಡೆಯುವದೇ ಅಭ್ಯಾಸ ದೇವದತ್ತವಾದ ಜ್ಞಾನ ಜ
ಜವು ಯಾವತ್ತು ಮನುಷ್ಯರಲ್ಲಿ ಉಂಟೇ ಉಂಟು ಅ
ಕ್ಕೆ ಒಳ್ಳೆ ಸಾಲಿಯೆಂಬ ಹೊಲವೂ ಉತ್ತಮ ಮಾಸ್ತರನೆಂ
ಬ ಪ್ರಕಾಶವು ಮನಃಪೂರ್ವಕ ಅಭ್ಯಾಸ ಮಾಡುವದೆಂಬ ಬೀ
ಲವೂ ಹೂರೆತಕೆ ಜ್ಞಾನವು ಅಂಕುರಿಸಿ, ಫಲ ಕೊಡ
ಎಂದಿಗೂ ಬಿಡದು. ವಿದ್ಯ ಶಬ್ಧವು ವಿದ ಅಂದರೆ ತಿಳಿ ಎಂ
ಸಂಸ್ಕೃತ ಧಾತುವಿನಿಂದ ಹೊರಟುಕಾರಣ ಎಲ್ಲ ಪ್ರಕಾರದ
ಳುವಳಿಕೆ ಹುಟ್ಟಿಸಿ ಕೊಡುವದೇ ವಿದ್ಯವು. ಆರೈಕೆ ಮಾಡಿ ಬೀ
ಸಿನ ಗಿಡವು ತೀವ್ರವಾಗಿಯೂ, ಉತ್ತಮವಾಗಿಯೂ ಬೆ
ಯುವಂತೆ, ಉತ್ತಮ ಸಾಲಿಯಲ್ಲಿ ಅಭ್ಯಾಸ ಮಾಡಿದ
ಡುಗ ಹುಡುಗಿಯರು ತೀವ್ರ ಜಾಣರಾಗುತ್ತಾರೆ. ಈ ಜಾಣ
ವವು ಆವರಿಸಿ ಅಮರಣ ಪರಿಯಂತ ಹೊಟ್ಟಿಗೆ ಕೊಡುತ್ತ
ಆದಕಾರಣ ವಿದ್ಯೆ ಕಲಿಸುವ ಸ್ಥಲವು ಎಷ್ಟು ಮುಕ್ಯವೆ
ಬದು ವಿಚಾರಶೀಲರಿಗೆ ತೋಚದು ಇರದು. ನಂಮ ದಯಾ
ಸರಕಾರದವರು ಬಹಳ ಕರುಣೆಪೆಚ್ಚಮಾಡಿ ಸಾಕ್ಷಾತ ಲಾಭವಿ
ವಿಮ್ಯಾಖಾತೆಯಂನು ನಡಿಸಿದ್ದಾರೆ, ಆದಕಾರಣ ಎಲ್ಲರು ಆ
ಆದಷ್ಟು ಸಹಾಯ ಮಾಡಬೇಕು. ಜಾಪತನವು ಅಭ್ಯಾಸದ
ಗ್ಯಾಮವು, ಮೂರ್ಖತನವು ಅಭ್ಯಾಸ ಮಾಡದ್ದರ ಪರಿಣ

ಪ್ರ ಇಂಥವ ಮೂರ್ಖ, ಇವನಿಗೆ ಎಷ್ಟು ಕಲಿಸಿದರೂ ಕಲಿಯನು
ಂಬ ಮಾತಿನಲ್ಲಿ ಮಿಥ್ಯಾಂಸ ಬಹಳವಿದೆ. ಜಾತ್ಯಾ ಜಾಣ
ನಾದವನು ಬೇಪ್ರ ಕಲಿಯುತ್ತಾನೆ. ಆದರೆ ಎಷ್ಟುದಿನ ಕಲಿಸಿದರೂ
ಕಲಿಯದೆ ಇರುವವನು ಅಪರೂಪ. ಆದ್ದರಿಂದ ಕಲಿಯುವವರೂ
ಲಿಸುವವರೂ ಮೂರ್ಖಶಬ್ದಕ್ಕೆ ಹೆಚ್ಚು ಅರ್ಥ ಕೊಡದೆ ಪ್ರ
ಮುಖ್ಯ ಸಾಧ್ಯವಾದ ವಿಷಯವನ್ನು ಹೇಳಿಸುವದಕ್ಕೆ ಶ್ರಮಪಡ
ೇಕು. ಶ್ರಮಪಟ್ಟು ಮೇಲೆ ಕಾರ್ಯಕ್ಕೆಗೂಡದೇ ಹೋದರೆ,
ಯತ್ನೆ ಕೃತೆ ಯದಿನಸಿಧ್ಯತಿ ಕೋತ್ರದೋಷಃ" ಎಂಬಂತೆ
ಯತ್ನ ಮಾಡಿದವನಮೇಲೆ ದೋಷಬರುವದಾದರೂ ತಪ್ಪುವದು.

೨ ಶಾಲಾಗುರುತ್ವ.

ಾಸ್ತ್ರನೂ, ವಿದ್ಯಾರ್ಥಿಯರೂ, ಶಾಲಾಗ್ರಹವೂ, ಪುಸ್ತಕ ನ
ಕೆಗಳೂ, ಖುರ್ಚಿ ಮೇಜು ಬಾಕುಗಳೂ ಮುಂತಾದವುಗಳು
ಇದ್ದರೆ ಸಾಲಿಯಾಗುವದು. ಆದ್ದರಿಂದ ಈ ವಿಷಯಗಳಲ್ಲಿ
ಯೊಂದೆಂದನು ಬೇರೆ ಬೇರೆ ತೆಗೆದುಕೊಂಡು, ಅವುಗಳು
ಬಂಧವಾದ ನನ್ನ ಅಭಿಪ್ರಾಯವನ್ನು ಬುದ್ಧಿಗೆ ತೋಚಿದ
ು, ತೋರಿ ಕೊಡುತ್ತೇನೆ:——

ದೇವಾಲಯಕ್ಕೆ ದೇವರೂ, ಶರೀರಕ್ಕೆ ಜೀವವೂ ಹ್ಯಾ
ಅಗತ್ಯವಾಗಿರುವ್ದೋ, ಹಾಗೆ ಸಾಲಿಗೆ ಮಾಸ್ತರನು ಬೇಕಾ
ನು. ಇವನ ಕೆಲಸಕ್ಕೆ ಕಾದವರು ಕಂಡಂತೆ ನೆಸರಿಟ್ಟಿ
, ಮೂಢ ಜನರಲ್ಲಿ ಅಜ್ಞಾನ ಮೂಲಕವಾಗಿ ಇವನಿಗೆ ತ
ಾನವಿದ್ದು ಹೊರಿಯುದಿದ್ದರೂ, ಇವನು ಮಾಡುವ ಉದ್ಯೋ
ದಾಗುವ ಅಪೇಕ್ಷಿತ ಪರಿಣಾಮಗಳನ್ನು ಆಲೋಚಿಸಿ ನೋ
ಮಾಸ್ತರನ ಉದ್ಯೋಗವು ಬಹು ಘನವಾದದ್ದೆಂದು
ಿಂಪಡೆಯುವ್ದೆ ಇರದು. ಈಗ್ಗೆ ಸುಮಾರು ಹನ್ನೆರಡು ವ

ಧಿಕಾರಗಳನ್ನು ಪಡೆದ ಮಾಮಲೇದಾರ, ಮುನಶೀಫ
ಲ್ಲೊಂದು ಒಬ್ಬ ಸಂಗ್ಯ ಕಾರಕೂನನ ಪರಿಯಂತರ ನೋಡಿ
ಸಾಲಿಯ ಸಂಖ್ಯಾರವಾಗದೆ ಇರುಪಮರ ಒಬ್ಬರಾದರೂ
ರಕವದು ದುರ್ಲಭ!! ಆದ್ದರಿಂದ ಶಾಲಾಖಾತೆಯು
ಖಾತೆಗಳ ತಾಯಿಯೆಂದು ಅನ್ನ ಬಹುದು. ಪಠಿಯಚಿ
ಹಾಕಿದ ಮೇಣದ ಮೇಲೆ, ಕೆಳಗಿರುವ ಆಕೃತಿಯು
ತೆ ಮಾಸ್ತರನ ಗುಣ ಸ್ವಭಾವ ಬುದ್ಧಿಗಳಿಗನುಸಾರವಾಗಿ
ಗರ ಬುದ್ಧಿಯಾದರು ತದ್ರೂಪವಾಗುವದು. ಮಾಸ್ತರನು
ಮುಮತೆಯುಳ್ಳವನಾಗಿರಬೇಕು. ಅವನ ಕೈಯಲ್ಲಿ ತಾಯಿ
ದೆಗಳು ತಮ್ಮ ಕಂದರನ್ನು ಪೂರ್ಣ ವಿಶ್ವಾಸದಿಂದ
ಹೋಗುವ, ಕಾರಣ ಅವನಿಗುಂಟಾದ ಅಧಿಕಾರವು
ಯಿ ತಂದೆಗಳಿಂದಲೇ ದೊರೆಯುತ್ತದೆಂಬದರಲ್ಲಿ ಸಂಶ
ಲ್ಲ ಪರರಮ್ಯೆಗೆ ಅಕಾರಣವಾಗಿ ಒಂದು ಒಟ್ಟು ಹೊಗಲಿಸಿದರೆ ಶೀ
ನೋಣಾಗುತ್ತದೆ ಆದರೆ, ಮಾಸ್ತರನು ಹುಡುಗರ ಕಲ್ಯಾ
ಗಿ, ತಕ್ಕ ಶಿಕ್ಷೆ ಕೊಡಲು ಶಕ್ತನಾಗಿರುತ್ತಾನೆ. ಮಾ
ಗೂ ವಿದ್ಯಾರ್ಥಿಯರಿಗೂ ಇರತಕ್ಕ ಸಂಬಂಧವು ವಿದ್ಯಾ
ರಲ್ಲಿದ್ದಂಥದಾಗಲಿ, ಅಂಗತಂಮಂದಿರಲಿದ್ದಂಥದಾಗಲಿ
ಶಿಕ್ಷೆ ಕೊಡುವ ಪ್ರಸಂಗವೇ ಸಿಗಗುವದಿಲ್ಲ. ಮಾಸ್ತರ
ಪಾಕೂ, ನಡತೆ ನುಡತೆಗಳೂ ಚಡಪಯಿಕೆಯುಂ ಬೈಪಾ
ಹಿಂಬಾಲಿಸಲಿಕ್ಕೆ ಯೋಗ್ಯವಾದಂಥವುಗಳಾಗಿ ಇರ
ಶ್ರೀಮಂತರೂ, ಬಡವರೂ; ಅಧಿಕಾರಿಗಳೂ, ಅನ
ಳೂ; ಸ್ವಜಾತಿ; ಪರಜಾತಿ; ನಂಬುವ, ನಂಬದವ;
ಪಕ್ಷಪಾತಾಂಗಗಳು ಮಾಸ್ತರನಲ್ಲಿ ಮೂಳೆದೋರಬಾರದು
ಮುಂದೆ ಸಾಗುವದು. ಶ್ರೀ. ರಾ.

Trigonometry.
ತ್ರಿಕೋಣಮಿತಿಯು

ವರ್ತುಳದ ಸಂಬಂಧದಿಂದ ಯಾವ ಯಾವ ರೇಖೆಗೆ
ವ ಯಾವ ಸಂಜ್ಞೆಯನ್ನು ಕೊಟ್ಟಿದ್ದು ತಿಳಸಲ್ಪಟ್ಟಿತು.
ಇಷ್ಟರಿಂದಲೇ ಈ ಸಂಬಂಧಗಳ ಜ್ಞಾನವು ಜನ್ಮ
ಆಗುವದೆಂದು ತಿಳಕೊಂಬುವದು ಸಮುವಲ್ಲ. ಕಾಟಕೋನ ತ್ರಿ
ಣದ ಸಂಬಂಧದಿಂದ ಇವುಗಳು ಹ್ಯಾಗೆ ಹೊರಡುತ್ತ
ುವದನ್ನು ತೋರಿಸುವದು ಅವಶ್ಯವಾದ ಕಾರ್ಯವು.



ಅಆಕ ಕಾಟಕೋನ ತ್ರಿಭು
ಣದಲ್ಲಿ ಅ ಬಿಂದುವ
ಕೇಂದ್ರ ಮಾಡಿ ಅಆ
ತ್ರಿಜ್ಯದಿಂದ ಕಆಗ ವರ್ತು
ನ್ನು ತೆಗೆಯಲು, ಹಿಂದೆ
ರಿಸಿದಂತೆ ಆಕವು ಅ
ನದ ಭುಜಜ್ಯವಾಗುವದು. ಆದರೆ ಇಷ್ಟೇ ತಿಳದು ಉಪ
ೀಗವಿಲ್ಲ. ಆಕದ ಅಳತಿ ಎಷ್ಟೆಂಬುವದು ನಮಗೆ ತಿಳಿ
ವದು ಅವಶ್ಯವಾದ ಮೂಲಕ ಇವುಗಳೊಳಗಿನ ಯಾವ
ದರೊಂದು ಸರಳರೇಖೆಯ ಅಳತಿಯನ್ನು ಕ್ಲಿಪ್ತ ಮಾಡಿ
ಂಡರೆ ಉಳಿದ ಸರಳರೇಖೆಗಳ ಅಳತಿಗಳು ಗೊತ್ತಾಗುತ್ತ
ವರ್ತುಳಕ್ಕೆ ತ್ರಿಜ್ಯವು ಮುಖ್ಯವಾದ ರೇಖೆಯೊದ್ದರಿಂದ
ಕ್ಕೆ ಯಾವದಾದರೊಂದು ಬೆಲೆಯನ್ನು ಕೊಟ್ಟರೆ ಉಳಿದ
ತಿಗಳ ಬೆಲೆಗಳು ಸಹಜವಾಗಿ ಹೊರಡುವವು. ತಸ್ಮಾತ
ಜ್ಯವು ಒಂದೆಂದು ಕಲ್ಪಿಸಲು ಏನಾಗುತ್ತದೆಂದರೆ——

$$\frac{\text{ಬಡ}}{\text{ಅಬ}} = \frac{\text{ಲಂಬ}}{\text{ಕರ್ಣ}} = \frac{\text{ಭು}\cdot\text{ಅ}}{\text{ಗ}} = \text{ಭು}\cdot\text{ಅ}$$

ಅದೇ ತ್ರಿಕೋಣವನು ಮುನಃ ತಕ್ಕೊಂಡು ಬ ಬಿಂದುವನ್ನು ಕೇಂದ್ರ ಮಾಡಿ ಅಬ ತ್ರಿಜ್ಯದಿಂದ ನಮ ವರ್ತುಳವನು ತೆಗೆಯಲ್ಪಟ್ಟಿತು. ಅಡವು ಬ ಕೋನದ ಭುಜಜ್ಯವು ಕಾರಣ ಅದು ಅ ಕೋನದ ಕೋಭುಜಜ್ಯವು, ಯಾಕಂದರೆ ಕೋನವು ಅ ಕೋನದ ಕಾಂಪ್ಲಿಮೆಂಟಾಗಿರುತ್ತದೆ. ಮೇಲಿನ ತೆ ತ್ರಿಜ್ಯದ ಬೆಲೆಯು ಒಂದೆಂದು ತಿಳುಕೊಳ್ಳಲು

$$\frac{\text{ಅಡ}}{\text{ಅಬ}} = \frac{\text{ಪಾದ}}{\text{ಕರ್ಣ}} = \frac{\text{ಕೋಭು}\cdot\text{ಅ}}{\text{ಗ}} = \text{ಕೋಭು}\cdot\text{ಅ}$$

ಅಸಕ ಕಾಟಕೋನತ್ರಿಕೋಣವಲ್ಲಿ. ಅ ಜಿಂದುವಿನಿಂದ ಅಕ ತ್ರಿಜ್ಯವನ್ನು ಮಾಡಿ ಕನಮ ವರ್ತುಳವನು ತೆಗೆಯಲು ಕಸ ರೇಖೆಯು ಅ ಕೋನದ ಸ್ಪರ್ಶರೇಖೆಯಾಗುತ್ತದೆ. ಈ ತ್ರಿಜ್ಯವು ಒಂದೆಂದು ಕಲ್ಪಿಸಿ ಅದರಿಂದ ಕಸಕ್ಕೆ ಭಾಗಿಸಲು-

$$\frac{\text{ಕಸ}}{\text{ಅಕ}} = \frac{\text{ಲಂಬ}}{\text{ಪಾದ}} = \frac{\text{ಸ್ಪಶ್}\cdot\text{ಅ}}{\text{ಗ}} = \text{ಸ್ಪಶ್}\cdot\text{ಅ}$$

ಅದೇ ತ್ರಿಕೋಣದಲ್ಲಿ ಸ ಕೇಂದ್ರದಿಂದ ಸಕ ತ್ರಿಜ್ಯವನು ಮಾಡಿ ಕನಜ ವರ್ತುಳವನು ತೆಗೆಯಲು ಅಕ ಬ ಕೋನದ ಸ್ಪರ್ಶರೇಖೆಯಾಗುತ್ತದೆ. ಆದರೆ ಬ ಕೋನವು ಅ ಕೋನದ ಕಾಂಪ್ಲಿಮೆಂಟಾಗಿ ಪಾದದಿಂದ ಅಕವು ಅ ಕೋನದ ಕೋಸ್ಪರ್ಶರೇಖೆಯಾಯಿತು. ಸಕದ ಬೆಲೆ



ಮ ಹಿಂದೆಂಸು ತಿಳು ಕೊಂದಲ್ಲಿ —

$$\frac{\text{ಕ}}{\text{ಸ}} = \frac{\text{ಪಾದ}}{\text{ಲಂಬ}} = \frac{\text{ಕೋಸ್ಪ}\cdot\text{ಅ}}{\text{೧}} = \text{ಕೋಸ್ಪ}\cdot\text{ಅ}.$$

ಅಸಕ ಕಾಟಕೋನ ತ್ರಿಕೋಣದಲ್ಲಿ ಅಸವು ಅಕೋನದ ವನರೇಪೆಯು. ಅಕ = ೧ ಆದ್ದರಿಂದ —

$$\frac{\text{ಅಸ}}{\text{ಅಕ}} = \frac{\text{ಕರ್ಣ}}{\text{ಪಾದ}} = \frac{\text{ಛೆ.ರೆ.ಅ}}{\text{೧}} = \text{ಛೆ.ರೆ.ಅ}.$$

ಮತ್ತು ಅದೇ ತ್ರಿಕೋಣದಲ್ಲಿ ಸಅವು ಕ ಕೋನದ ೀದನರೇಪೆಯಾದರಿಂದ ಅಕೋನದ ಕೋಛೇದನರೇಪೆಯ ು.

ಸಕ = ೧ ಆದ್ದರಿಂದ —

$$\frac{\text{ಸಅ}}{\text{ಸಕ}} = \frac{\text{ಕರ್ಣ}}{\text{ಲಂಬ}} = \frac{\text{ಕೋಛೆ.ರೆ.ಅ}}{\text{೧}} = \text{ಕೋಛೆ.ರೆ.ಅ}.$$

ದನೇ ಆಕೃತಿಯಲ್ಲಿ ಅಕ=೧ ಆದ್ದರಿಂದ —

ಪಾಪ=ಶರ.ಅ

ಅದೇ ಆಕೃತಿಯಲ್ಲಿ ಕನ=೧ ಆದ್ದರಿಂದ —

ಲಂಬ =ಕೋಶರ. ಅ.

ಪ್ರಕಾರ ಅ ಕೋನದ ಆ ತ್ರಿಕೋಣಮಿತಿಯ ಸಂಬಂಧ ು ಸಿದ್ಧ ಮಾಡಿ ತೋರಿಸಲ್ಪಟ್ಟಿವು. ಅವುಗಳಂತು ಒಟ್ಟು ಸಿ ಕೆಳಗೆ ಬರೆಯುತ್ತೇವೆ.

$$\frac{\text{ಲಂಬ}}{\text{ಕರ್ಣ}} = \text{ಜ್ಯ}\cdot\text{ಅ}. \quad \ldots \quad \ldots \quad \ldots \quad \ldots \quad ೧$$

$$\frac{\text{ಪಾದ}}{\text{ಕರ್ಣ}} = \text{ಕಾಜ್ಯ}\cdot\text{ಅ} \ldots \quad \ldots \quad \ldots \quad \ldots ೨$$

ಲಂಬ
——— = स्प.अ° ೩
ಪಾದ

ಪಾದ
——— = कोस्प.अ.... ....೪
ಲಂಬ

ಕರ್ಣ
——— = छे.रे·अ..... ....೫
ಪಾದ

ಕರ್ಣ
——— = कोछे·अ... ....೬
ಲಂಬ

೧— ಪಾದ = शर·अ ೭

೧— ಲಂಬ = कोशर·अ.... ....೮

Correspondence.

ಪತ್ರವ್ಯವಹಾರ.

(ಜೂನ ಅಂಕಗಳಿಂದ ಮುಂದೆಸಾಗಿದ್ದು.)

ಸಮಾಸವಿಷಯ.

ಪ್ರ.—'ಗಮಕ ಸಮಾಸದ ಲಕ್ಷಣವೇನು?

ಉ—ಪೂರ್ವಪದವು ಸರ್ವನಾಮಕ, ಸಂಖ್ಯಾವಾಚಕ, ಗುಣ
ವಾಚಕ, ದಿಗ್ವಾಚಕ, ಕೃದ್ವಾಚಿಕಗಳಲ್ಲಿ ಹಿಂದಾಗಿದ್ದು ಪರ
ದವು ನಾಮ, ಸರ್ವನಾಮಗಳಲ್ಲಿ ಹಿಂದಾಗಿರುವದೇ 'ಗಮಕ
ಸಮಾಸದ ಲಕ್ಷಣವು.

ಪ್ರ.—ಹಾಗಾದರೆ ಪೂರ್ವಪದವು ಸರ್ವನಾಮವಾಗಿದ್ದ (೧೦
ಗಮಕಸಮಾಸದ ಉದಾಹರಣೆಗಳನ್ನು ಹೇಳು.

ಉ.—೧ ಯಾವ ಮನುಷ್ಯ, ೨ ಈ ಪುರ, ೩ ಆಂಥವನು,
ಯಾರವನು, ೫ ಏನದು, ೬ ಆ ಮನೆ, ೭ ಯಾವಮಾತು,

ಅದೇಮಾತು, ೯ ಎಂಥಾದದು, ೧೦ ಆಂಥಾದ್ದು

—ಸಮಾಸ ಪದವು ಸಂಖ್ಯಾವಾಚಕವಾಗಿದ್ದು (೧೦) ಗಮ ಸಮಾಸ, ಉ ಉದಾಹರಣೆಗಳನ್ನು ಹೇಳು.

—೧ ಎರಡು ಕುದುರೆಗಳು, ೨ ಮೂರು ಮಣಿಕಗಳು, ೩ ಒಂದು ಗಳ, ೪ ಮೊನಲನೇ ತಿಂಗಳು, ೫ ನಾಲ್ಕು ಬಂಗಳು, ೬ ಎರಡನೆಯದು, ೭ ಐದು ಬೆರಲುಗಳು, ೮ ಅರವ ಆನೆಗಳು, ೯ ಹಂನೊಂದು ಎತ್ತುಗಳು, ೧೦ ಹತ್ತೊಂ ತ್ತು ಮುಂಗಲಿಗಳು.

—ಗುಣವಾಚಕವಾಗಿದ್ದ (೧೦) ಉದಾಹರಣೆಗಳನ್ನು ಹೇಳು.

—೧ ಬೆಳ್ಳೀ ಬೆತ್ತ, ೨ ಕರೇ ಕುದುರೆ, ೩ ಸಂಣಕೆರಿ, ಸೊಡ್ಡಗುಡ್ಡ, ೫ ಹಿರೇಮಗ, ೬ ಎಳೆರಳರು [ಎಳೆ + ತಳರು] ಕೆಂಗಾಯಿ, ೮ ಚಿಕ್ಕದು, ೯ ಶುದ್ಧಮನಸ್ಸು, ೧೦ ಹ ುಡಿಗೆ.

—ದಿಗ್ವಾಚಕವಾಗಿದ್ದ (೧೦) ಉದಾಹರಣೆಗಳನ್ನು ಹೇಳು.

—೧ ಉತ್ತರಕ್ಕು, ೨ ಪಶ್ಚಿಮಗಿರಿ, ೩ ದಕ್ಷಿಣಸ ಪ್ರ, ೪ ಮೇಲಣವನು, ೫ ಕೆಳಗಿನವೂರು, ೬ ಮೂ ಪೆಟ್ಟಿ, ೭ ಬಡಗಣ ಬಾಗಿಲು, ೮ ಹಿಂಯಿನ ಬೇಲಿ, ೯ ಾದಲ ದಾರಿ, ೧೦ ಆಚೇ ಹೊಲ.

—ಕೃದ್ವಾಚಕವಾಗಿದ್ದ (೧೦) ಉದಾಹರಣೆಗಳನ್ನು ಹೇಳು.

—೧ ಅಳುವ ಕೂಸು, ೨ ಹೋದ ವರುಷ, ೩ ಕಾಣ ತ್ತ, ೪ ಮಾಡುವವ, ೫ ಮಾಡಿದವನು, ೬ ಮಾಡದ ೭ ಕೆಟ್ಟವರಿ, ೮ ಬಂದ ಹಬ್ಬ, ೯ ನಿಂತನೀರು, ೧೦ ಹ ಹೊಳೆ.

—ಕ್ರಿಯಾಸಮಾಸ, ಲಕ್ಷಣವೇನು?

ಉ.—ಪೂರ್ವಪದವು ನಾಮ, ಅಥವಾ ಗುಣವಾಚಕಗಳಲ್ಲಿ ಒಂದಾಗಿದ್ದು ಪರಪದದಲ್ಲಿಪ್ಪ ಕ್ರಿಯಾಪದದ ಅರ್ಥವನ್ನು ಬಿಚ್ಚಿಹೇಳುವದೇ ಕ್ರಿಯಾಸಮಾಸದ ಲಕ್ಷಣವು.

ಪ್ರ.—ಹಾಗಾದರೆ ಈ ನೇಮಕ್ಕೆ ಅನುಸರಿಸಿ (೧೦) ಉದಾಹರಣೆಗಳನ್ನು ಹೇಳು.

ಉ—೧ ಈಜಾಗು, ೨ ಅಡ್ಡಬೀಳು, ೩ ಕೈಮುಗಿ, ೪ ಪುಸುರಿಕ್ಕು, ೫ ಬಲಗೊಳ್ಳು, ೬ ಅಗಳಾಡು, ೭ ಭಯಪಡು, ೮ ರಭಗಳಾಡು, ೯ ಕಂಗೆಡಿಸು, ೧೦ ಅಡ್ಡಗಟ್ಟು.

—೫೫—

ಪ್ರ.—ಈಗ ನಿನಗೆ ಸಮಾಸದ ವಿಷಯವಾಗಿ ಏನೇನು ತಿಳಿದಂತಾಯಿತು?

ಉ.—, ಸಮಾಸ, ಅಂದರೇನು? ಅದರಲ್ಲಿ ಪದಗಳೆಷ್ಟು? ಯಾವ ಯಾವ ಪದಕ್ಕೆ ಏನೇನು ಆಗುತ್ತಾರೆ? ಸಮಾಸದ ಪ್ರಕಾರಗಳೆಷ್ಟು? ಕನ್ನಡಸಮಾಸವೆಂದರೇನು? ಸಂಸ್ಕೃತಸಮಾಸವೆಂದರೇನು? ಪೂರ್ಣ. ಅರಿಸಮಾಸಗಳಂದರೇನು? ಅರಿಸಮಾಸವನ್ನು ಯಾಕೆ ಮಾಡಬಾರದು? ಮಾಡಬಾರದೆಂದಕ್ಕೆ ಆಧಾರವೇನು? ಎಂಬವೆಲ್ಲಾ ತಿಳಿದಂತಾಯಿತು. ಇದಲ್ಲದೇ ಕನ್ನಡದಲ್ಲಿದ್ದ ನಾಲ್ಕು ಸಮಾಸಗಳೂ ಅವುಗಳ ಲಕ್ಷಣಗಳೂ ತಿಳಿದವು.

ಪ್ರ.—ಹಾಗಾದರೆ ಕೆಳಗೆ ಬರೆದ ವಾಕ್ಯಗಳಲ್ಲಿದ್ದ ಕನ್ನಡ ಸಮಾಸಗಳ ಪ್ರಕಾರಗಳನ್ನು ಹೇಳು:—

ವಾಕ್ಯಗಳು.

೧ ಕುಂಭಜೀನರಾಕಾರದಲ್ಲಿ ಬಾಯ್ತೆರೆದ ಬಹಳ ಮಾಪಡ್ಡೆಯುವಿಲ್ಲಿ. ೨ ಪೊಟ್ಟಿಸೂಲಿ ಯೆದ್ದಾಗ ಅಜವಾನ

ತಮಿಳ ಲಿಪಿಯು ಇತ್ತಕಡಿಯವರಿಗೆ ಬಹುತರ ಸೊ
ತ್ತಿರುವದಿಲ್ಲಾದ ಕಾರಣ ಅದರ ವರ್ಣಮಾಲೆಯನ್ನು ಕೆಲ
ವು ವಾಕ್ಯಗಳು ಸಹಿತವಾಗಿ ಕೆಳಗೆ ಕೊಡುತ್ತೇವೆ.

ತಮಿಳ ವರ್ಣಗಳು.

ಅ, ಆ, ಇ, ಈ, ಉ, ಊ, ಎ, ಏ, ಐ, ಒ, ಓ, ಔ,
ಕ್, ಙ್, ಚ್, ಞ್, ಟ್, ಣ್, ತ್, ನ್, ಪ್, ಮ್, ಯ್, ರ್, ಲ್,
ವ್, ೞ್, ಱ್, ನ್, ಜ್.
ಶ್, ಷ್, ಸ್, ಹ್, ಕ್ಷ್, ಸಂಸ್ಕೃತ ವ್ಯಂಜನಗಳಲ್ಲಿ

ಕಾರದ ಬಳ್ಳಿ.

ಕ, ಕಾ, ಕಿ, ಕೀ, ಕು, ಕೂ, ಕೆ, ಕೇ, ಕೈ, ಕೊ,
ಕೋ, ಕೌ.

ವತ್ತಕ್ಷರಗಳು.

ಪೞ್ಕೀರ್, ನಲ್ಲ, ನಲ್ಲು, ನಲ್ಕ, ಮುವ, ಐನ್ಕ,
ಅಮ್ಮ, ಪಡ, ಪ್ರಭು, ಕರ್ಣ, ಅಷ್ಟ, ಮಿತ್ರ,

ವಾಕ್ಯಗಳು, ಉಚ್ಚಾರ
ಸಹಿತ

ಶಾಲಾಪತ್ರಕವ್ಯ.

ಪುಸ್ತಕ ೧೩] [ಸಂಚಿಕೆ ೯

ಸಪ್ಟಂಬರ, ೧೮೬೬.

Educational Intelligence.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು

ಮುಂದೆ ಬರುವ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗಾಗಿ ಒ
ಂದು ಪರೀಕ್ಷಕರು ನೇಮಿಸಲ್ಪಟ್ಟಿದ್ದಾರೆಂದು ಕೇಳುತ್ತೇವೆ.
ರ ಹೆಸರುಗಳು—ರೆವರೆಂಡ ಹ್ಯಾಮಿಲ್ಟನ್, ರೆವರೆಂಡ ಗ್ರೀವ್ಸ್;
ಎ. ಪೀಟರಸನ್, ಮಿ. ಫಾರೆಸ್ಟ, ಮಿ. ಸೆಲ್ಬಿ, ಮಿ.
ವೈಕ್‌ಮಿಲನ್, ಮಿ. ಪಿನ್ಹಿ.

—o—

ಅಮೇರಿಕದಲ್ಲಿ ಈಗ ವೊಂದು ಹೊಸ ಕಾಯದೆಯು ಮ
ಡಿಯು ಕೌನ್ಸಿಲ್ಲಿನ ಸಭೆಯವರ ಮುಂದೆ ಬಂದಿರುತ್ತ
ಅದರಲ್ಲಿ ಕೋಲಂಬಿಯಾ ಪ್ರಾಂತದ ಸರಕಾರೀ ಶಾ
ಗಳಲ್ಲಿ ವ್ಯವಹಾರ ಶಾಸ್ತ್ರವನ್ನೂ ನೀತಿ ಶಾಸ್ತ್ರವನ್ನೂ ಕ
ಸಬೇಕೆಂದು ನಿಬಿಂಧನೆಯುಂಟು. ಈ ಶಾಸ್ತ್ರಗಳೆಂದರೆ—
ಧೈರ್ಯ, ಕ್ರಮ, ಮಿತವ್ಯಯ, ನಿಯತತ್ವ, ತಾಳ್ಮೆ, ಆ
ಸಂಯಮನ, ಆರೋಗ್ಯ, ಶುಚಿತ್ವ, ಮಿತವೃತ್ತಿ, ಸ್ವಚ್ಛ
ಪ್ರಮಾಣಿಕತನ, ಸತ್ಯ, ನ್ಯಾಯ, ನಮ್ರತ್ವ, ಶಾಂತ
ವಿಶ್ವಾಸ, ಮನುಷ್ಯಪ್ರೀತಿ, ದೇಶಾಭಿಮಾನ, ಸ್ವಾಭಿಮಾ
ಆಶೆ, ದೃಢನಿಶ್ಚಯ, ಸಂತೋಷವೃತ್ತಿ, ಧೈರ್ಯ, ಆ

ತ್ಮವಿಶ್ವಾಸ ಕೃತಜ್ಞತೆ, ದಯ, ಮಮತೆ, ಆತ್ಮಜ್ಞಾನ, ಚಾರ, ಇಚ್ಛೆ, ಇತ್ಯಾದಿ ವಿಷಯಗಳೆಂದು ಆ ಕಾಯದೆ ಲ್ಲಿ ವಿವರಿಸಲ್ಪಟ್ಟಿದೆಂದು ಕೇಳುತ್ತೇವೆ. ತೀಕ್ಷಕರು ಇವು ಲ್ಲಿ ಕೆಲವೊಂದನ್ನು ವಿದ್ಯಾರ್ಥಿಗಳಿಗೆ ಪ್ರತಿದಿವಸ ಕಲಿಸ ಬೇಕೆಂದು ಆ ಕಾಯದೆಯಲ್ಲಿ ನಿರ್ಬಂಧ ವುಂಟು. ಅಮೆ ರಿಕ ಖಂಡದಲ್ಲಿ ಜನರ ವಸ್ತಿಯು ನೂರಿನ್ನೂರು ವರ್ಷಗಳ ಯಲ್ಲಿ ಆಗಿರುವಕಾರಣ ಆ ಖಂಡಕ್ಕೆ ಸದರೀ ಗುಣಗಳ ಜಗಳು ಇನ್ನೂ ಹೋಗಿರುವದಿಲ್ಲೆಂದು ತೋರುತ್ತದೆ.

—o—

ಖಿಲಾಯತಿಯಲ್ಲಿ ಕೈಗಾರಿಕೆಯ ಜನರು ಸರಕಾರಕ್ಕೆ ಡುವ ತೆರಿಗೆಯಲ್ಲಿ ಪ್ರತಿ ಪೌಂದಿನಲ್ಲಿ ೧೩ ಶಿಲಿಂಗು ಪೆನ್ಸುಗಳಂತೆ ಹಣವು ಸರಾಯಿ, ತಂಬಾಕ, ಇವೆರಡು ಯಿ ಸರಕಾರಕ್ಕೆ ಬರುತ್ತದೆಂದು ಪ್ರೊಫೆಸರ ಲಿಯೊನ ಯು ವನೊಬ್ಬ ಗೃಹಸ್ಥನು ಅಂದಾಜು ಮಾಡಿದ್ದಾನೆ.

—o—

ಪಶ್ಚಿಮ ಹಿಂದುಸ್ಥಾನದಲ್ಲಿ ಅಂದರೆ (ವಿಶೇಷವಾಗಿ ಬಯಿ ಇಲಾಖೆಯಲ್ಲಿ) ಮಾಲಿ, ಸಂಸ್ಕೃತ, ಹಳೆಗನ್ನಡ, ಮೂರು ಭಾಷೆಗಳಲ್ಲಿ ಬರಿದ ಶಿಲಾಲಿಪಿಗಳನ್ನು ಮೊಟ್ಟಮೊ ದೊಂದು ಪುಸ್ತಕವನ್ನು ಸ್ಟೀಟ ಸೆಕ್ರೆಟರಿಯವರು ಬೇಗ ಪ್ರ ಸ ತಕ್ಕಪರಿದ್ದಾರೆ. ಈ ನಮ್ಮ ದಕ್ಷಿಣ ಮಹಾರಾಷ್ಟ್ರ ಪ್ರ ತದಲ್ಲಿ ಪೊಳಗಡೆಯಲ್ಲಿ ಶಿಲಾಲಿಪಿಯ ಕೆಲಸದೊಳಪೆ ಹೆ ಪಾಡಿದವರಾದ ಮಿ. ಫ್ಲೀಟ ಸಾಹೇಬರು ಈ ಕೆಲಸವನ್ನು ಗ ಸ್ಟೀಟ ಸೆಕ್ರೆಟರಿಯವರ ಆಫೀಸಿನಲ್ಲಿ ಮಾಡುತ್ತಾರೆ. ಪರು ಸದ್ಯಕ್ಕೆ ಕಲಾದಗಿಯ ಅಸಿಷ್ಟಾಂಟ ಕಲೆಕ್ಟರರಿದ್ದು

ಿಸ್ಕೆಂದು ವಿಲಾಯತಿಗೆ ಹೋಗಿದ್ದಾರೆ.

—o—

ಜೆಪಾನ ದೇಶದಲ್ಲಿ ತೋಕಿಯೊ ಯೆಂಬ ಗ್ರಾಮದೊಳಗೆ ೃಳಗಡೆಯಲ್ಲಿ ವೊಂದು ಕೌತುಕದ ಸಂಗತಿಯು ವರ್ತಿಸಿ ಇಬ್ಬರು ಬೌದ್ಧ ಧರ್ಮೋಪದೇಶಕರು ವೊಂದು ಸಭೆ ನ್ನು ಕೂಡಿಸಿ, ಶಾಲೆಗಳಲ್ಲಿ ಇರುತ್ತಿದ್ದ ಭೂಮಿಯು ಕೃ ಮ ಗೋಲವನ್ನು ಆ ಸಭೆಯ ಮುಂದೆ ತಂದಿಟ್ಟು, ಯು ೋಪದವರ ಭೂಗೋಲಶಾಸ್ತ್ರದ ಸಿದ್ಧಾಂತಗಳನ್ನು ವೊಪ್ಪ ಸಭೆಯವರಿಗೆ ತಿಳಿಸಿ ಕೊಟ್ಟರು. ತರುವಾಯ ಆ ಭೂಟ್ಟಿ ನದರೀ ಶಾಸ್ತ್ರವು ೀರ ಸುಳ್ಳಾದದ್ದೆಂದು ಪ್ರತಿಪಾದಿಸಿ, ಮಿಯನ್ನು ಧಾರಣ ಮಾಡುವ ಸ್ತಂಭಗಳು ಅಚಲ ವುಂಟೆಂ ಸಿದ್ಧಾಂತ ಮಾಡಿದರು. ಆದರೆ ವೊಬ್ಬ ಖ್ರಿಸ್ತಿಯಾನ ಇ ರು ಸ್ಕೂಲ ಮಾಸ್ತರರೂ ಆ ಸಭೆಯಲ್ಲಿ ಇದ್ದರು. ಅವರು ಈ ಾತ ಸೈರಿಸದೆ, ಆ ಧರ್ಮೋಪದೇಶಕರ ಸಿದ್ಧಾಂತವು ಅ ಯೋಜಕವಾದದ್ದೆಂತಲೂ ಯುರೋಪದವರ ಭೂಗೋಲಶಾ ವು ಯಥಾರ್ಥವಾದದ್ದೆಂತಲೂ ಹೇಳಿ ಸಭೆಯಲ್ಲಿ ಪ್ರಸಂ ನಮಾಡಿದರು. ಅದರ ಪರಿಣಾಮವೇನಾಯಿತೆಂದರೆ, ಆ ಮೂ ರು ಸಭೆಯೊಳಗಿಂದ ಯೆದ್ದು ಹೊರಬಿದ್ದ ಕೂಡಲೆ ಸಭೆಯ ಕೂಡಿದ ಜನರೆಲ್ಲರು ಅವರ ಸುತ್ತು ಮುತ್ತು ನೆರೆದು, ಮೂವರ ತಲೆಯ ಮೇಲೆಕಲ್ಲುಗಳನ್ನು ಮನದಣಿ ಸೂ ಮಾಡಿದರು. ಅದರೊಳಗಿಂದ ಅವರು ಪಾರಾಗಿ ಹೋಗು ತನಕ ಪ್ರಾಣಸಂಕಟವಾಯಿತು.

—o—

ಪುದ್ರಾನ ಇಲಾಖೆಯಲ್ಲಿ ಮ್ಯುನಿಸಿಪಾಲಟಿಯ ಮೆಂಬರರ

ಮ್ಮ ನೇಮಿಸುವ ಅಧಿಕಾರವನ್ನು ಪ್ರಜೆಗಳಿಗೆ ಕೊಡಬೇಕಾ
ಅಲ್ಲಿಯ ಸರಕಾರದವರು ಆಲೋಚಿಸುತ್ತಾರೆಂದು ಕೇಳುತ್ತೇವೆ

—o—

ಪಾರಿಸ ಪಟ್ಟಣದಲ್ಲಿ ಮೊಳಗಡೆಯಲ್ಲಿ ಆದ ಪ್ರದರ್ಶ
ರೊಳಗೆ ಅಗ್ರೈಪಟ್ಟಣದ ತೆರೆಮನೆಯಲ್ಲಿ ಹುಟ್ಟಿದ ಜಮುಖ
ನೆಗಳು ಬಹು ಸುಂದರವಾಗಿ ತೋರಿದ ಕಾರಣ ಅಲ್ಲಿಯ
ಜನರು ಈಗ ಆ ಜಮುಖಾನೆಗಳನ್ನು ಕೊಳ್ಳಲಿಕ್ಕೆ ಹವಣಿಸುತ್ತಾರ
ತೆ. ಈ ಕಾರಣದಿಂದ ಸದರೀ ತೆರೆಮನೆಯಲ್ಲಿ ಈಗ ಎಳ
ನೋದಿದತ್ತ ಜಮುಖಾನೆಗಳನ್ನು ನೇಯುವ ಕೆಲಸವೇ ನಡ
ರುತ್ತದೆಂದು ಕೇಳುತ್ತೇವೆ.

—o—

ಮಿ. ಟ್ರೇನ ಯೆಂಬ ಮನುಷ್ಯನು ಮನುಷ್ಯ ದೇಹಕ
ಭೋಜನವು ಆವಶ್ಯಕವೋ ಅಲ್ಲವೋ, ಯೆಂಬದನ್ನು ಸ
ನುಭವದಿಂದ ವಿಶ್ವಯಿಸಿದ್ದು ಹ್ಯಾಗಂದರೆ—ಅವನು ಆರು
ವಸ ಯೇನೆನು ತಿನ್ನದೆ ಕುಡಿಯದೆ ಸ್ವಸ್ಥವಾಗಿ ಮಲ
ಕೊಂಡನು. ಈ ಅನುಭವದಿಂದ ಅವನು ೪ ಸಂಗತಿಗಳನ
ವಿಶ್ವಯಿಸಿದನು. ೧ ಅನ್ನ ತಕ್ಕೊಳ್ಳದೆ ಇನ್ನೂ ಹೆಚ್ಚು
ವಸ ಬದುಕ ಬಹುದು. ೨ ಕ್ಷುಧೆಯಿಂದ ದುಃಸಹ ಯ
ತನೆ ಯುಂಟಾಗುತ್ತದೆಂದು ಜನರು ಹೇಳುತ್ತಾರೆ, ಅದು
ಜವಲ್ಲ. ೩ ಉಪವಾಸದಿಂದ ಬುದ್ಧಿಯು ಬೆಳೆಯುತ್ತ
೪ ಉಪವಾಸದನಂತರ ಮಿತಿ ಮೀರಿ ಹಸಿವೆಯಾಗುವದಿಲ್ಲ.

—o—

ಮೆಹಬಾ ನ ಚಾಟಿಫೀಲ್ಡ ಧೊರೆಗಳು ತಮ್ಮ ರಜೆ
ಮುದ್ದತು ತುಂಬುವ ಪೂರ್ವದಲ್ಲಿಯೇ ವಿಲಾಯತಿಯಿ

ಹೊರಟು ಬರತಕ್ಕವರಿದ್ದಾರೆಂದು ಇಂಗ್ರಜೀ ಪತ್ರಗಳಿಂದ ತಿ
ಳಿಯುತ್ತೆವೆ.

—೦—

ಬೆಳಗಾವಿಯ ಮುಲಖೀ ಪರೀಕ್ಷೆಯ ಪ್ರೆಸಿಡೆಂಟರಾಗಿದ್ದ
ವಿ. ಹುಗ್‌ಪರ್ಸ್ ಸಾಹೆಬರು ಬೈಯಲ್ಲಿ ನೆಟ್ಟಗಿಲ್ಲದ ಕಾ
ರಣದಿಂದ ರಾಜಸಾಹೆಬ ಪಟವರ್ಧನ ಇವರು ಈ ತಿಂಗಳಿನ
೨೧ನೇ ತಾರೀಖಿನಲ್ಲಿ ಬೆಳಗಾವಿಗೆ ಹೋಗಿ ಅಲ್ಲಿಯ ಪರೀ
ಕ್ಷೆಯ ವ್ಯವಸ್ಥೆಯನ್ನು ನೋಡಿಕೊಂದು ನಾಲ್ಕಾರು ದಿವಸ ನಿಂತು
ತಿರುಗಿ ಧಾರವಾಡಕ್ಕೆ ಬಂದರು.

—೦—

ಧಾರವಾಡದಲ್ಲಿ ಮುಲಖೀ ಪರೀಕ್ಷೆಯು ೧೬ನೇ ತಾರೀ
ಖಿಗೆ ಮುರುವಾಗಿ ೨೩ನೇ ತಾರೀಖಿನಲ್ಲಿ ಸಮಾಪ್ತವಾಯಿ
ತು, ಉಮೇದವಾರರು ಇಂಗ್ಲಿಷದಲ್ಲಿ ೬೦ ಮಂದಿ, ಕನ್ನ
ಡದಲ್ಲಿ ೨೯೧ ಮಂದಿ, ಮರಾಠಿಯಲ್ಲಿ ೬ ಮಂದಿ ಬಂ
ದಿದ್ದರೆಂದು ತಿಳಿದದೆ. ಪರೀಕ್ಷೆಯ ನಿರ್ಣಯವು ಇನ್ನೂ
ಹೊರಬಿದ್ದಿಲ್ಲ. ಜಮಾಖರ್ಚಿನ ಪ್ರಶ್ನವು ಬಹಳ ಕಠಿಣವಿ
ತ್ತೆಂದು ಹೇಳುತ್ತಾರೆ.

ರಾ. ನಾ. ಪಾಂಡುರಂಗ ವೆಂಕಟೇಶ ಚಿಂತಾಮಣಿ ಪೇಟ
ಎ ಇವರು ಕಾರವಾಡದ ಹಾಯಸ್ಕೂಲಿನ ಹೆಡ್ ಮಾಸ್ತ
ರು ಆಗತಕ್ಕವರಿದ್ದಾರೆಂದು ಕೇಳುತ್ತೇವೆ.

———

ವಿದ್ಯಾ ಖಾತೆಯ ವ್ಯವಸ್ಥೆಯಲ್ಲಿ ಬಹಳ ಹೆಚ್ಚು ಕಡಿಮೆ
ಯಾಗ ತಕ್ಕದ್ದುಂಟೆಂದು ಸುದ್ದಿಯುಂಟು.

—೦—

Structure of the Dravidian languages.
ದ್ರವಿಡಭಾಷೆಗಳ ವರ್ಣೋಚ್ಚಾರಗಳು.

ಸ್ವರಗಳು——ಅ, ಆ, ಇವೆರಡು ಸ್ವರಗಳ ಉಚ್ಚಾರಣೆ
ಸಂಸ್ಕೃತೋಚ್ಚಾರದಂತೆ ಇರುತ್ತದೆ. ತಮಿಳ ನಾಮಗಳ ಕಡೆ
ಯಲ್ಲಿ ಅಕಾರ ಶ್ರವಣವು ಬಹುತರ ಆಗುವದಿಲ್ಲ; ಅಕಾ
ರಕ್ಕೆ ಬದಲಾಗಿ ಉಕಾರವು ಇಲ್ಲವೆ "ಎಯ್" ಯೆಂಬ ಸಂ
ಯುಕ್ತ ಸ್ವರವು ಉಚ್ಚರಿಸಲ್ಪಡುತ್ತದೆ. ನಾಮಗಳ ಕಡೆ
ಯ ಅಕಾರಕ್ಕೆ ಬದಲಾಗಿ ತಮಿಳದಲ್ಲಿ ಎಯ್‌ಕಾರವೂ
ಬರುತ್ತಿದ್ದಲ್ಲಿ ಕನ್ನಡದಲ್ಲಿ ಬಹುತರ ಎಕಾರವು ಬರುತ್ತದೆ.
ಆದರೆ ಕೆಲವು ಕಡೆಯಲ್ಲಿ ಅಕಾರವೇ ಉಳಿಯುತ್ತದೆ. ಈ
ಸ್ವರವು, ಅಂದರೆ ನಾಮಗಳ ಕಡೆಯ ಅಕಾರವು, ತೆಲಗು
ಮಲಿಯಾಳ ಭಾಷೆಗಳಲ್ಲಿ ಬಹಳವಾಗಿ ಬದಲಾಗುವದಿಲ್ಲ.
ಮೊದಲು ನಪುಂಸಕ ಬಹು ವಚನದಲ್ಲಿ ಅಕಾರಾಂತವಾಗಿಯೂ
ಅಭಿಧಾನ ವಾಚಕಗಳೂ ಸರ್ವನಾಮಗಳೂ ತಮಿಳದಲ್ಲಿ ಎಯ್‌ಕಾ
ರಾಂತವಾಗಿಯೂ, ತೆಲಗಿನಲ್ಲಿ ಇಕಾರಾಂತವಾಗಿಯೂ ಕ
ನ್ನಡದಲ್ಲಿ ಉಕಾರಾಂತವಾಗಿಯೂ ಇರುತ್ತವೆ; ಆದರೆ ಮ
ಲಯಾಳದಲ್ಲಿ ಅಕಾರವೇ ಸ್ಥಿರವಾಗಿ ಇರುತ್ತದೆ. ಉದಾಹ
ರಣಾರ್ಥವಾಗಿ, ಪುರುಷವಾಚಕ ಸರ್ವನಾಮದ 'ಅವ' ಯೆ
ಬ ಮೂಲ ರೂಪವು ತಮಿಳದಲ್ಲಿ ಅವೆಯ್, ತೆಲಗಿನಲ್ಲಿ
ವಿ, ಕನ್ನಡದಲ್ಲಿ ಅವು, ಯೆಂಬ ರೂಪಗಳನ್ನು ಹೊಂದುತ್ತ
ಆದರೆ ಮಲಿಯಾಳದಲ್ಲಿ ಅವ ಯೆಂಬ ರೂಪವೇ ಉಳಿಯುತ್ತ

ಇದೇ ಮೇರೆಗೆ ಸಂಸ್ಕೃತ ಸ್ತ್ರೀಲಿಂಗ ನಾಮಗಳ ಕಡೆ
ಯ ಆಕಾರವು ತಮಿಳದಲ್ಲಿ ಎಯ್‌ಕಾರವೂ, ತೆಲಗಿನ

ಕಾರವೂ, ಕನ್ನಡದಲ್ಲಿ ಎಕಾರವೂ ಆಗುತ್ತದೆ. ಚಿತ್ರಾ ಯೆಂಬ
